# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038

ಸಂಪುಟ:02 • ಸಂಚಿಕೆ: 90 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 03.10.2024 • ಗುರುವಾರ • ಪುಟ:04 • ಬೆಲೆ:2
Volume:02 • Issue: 90 • PRGI No:KARKAN/2023/88055 • VIJAYANAGARA • 03.10.2024 • Thursday • Page:04 • Rs:2










# ಗಾಂಧಿ, ಶಾಸ್ತ್ರೀಜಿ ಭಾರತದ ಧ್ರುವ ನಕ್ಷತ್ರಗಳು

## ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಅಭಿಮತ | ಜಿಲ್ಲಾದ್ಯಂತ ಮಹಾತ್ಮಗಾಂಧಿ, ಶಾಸ್ತ್ರೀಜಿ ಜಯಂತಿ ಆಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಮಹಾನ್ ಚೇತನ ಹಾಗೂ ಉತ್ತಮ ನಾಯಕರಾಗಿ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಧ್ರುವ ನಕ್ಷತ್ರದಂತೆ ಗಾಂಧೀಜಿ ಮತ್ತು ಲಾಲ್ ಬಹದ್ದೂರ್‌ಶಾಸ್ತ್ರಿ ಇಬ್ಬರೂ ಮಹನೀಯರು ಹೋರಾಡಿ ಮಡಿದವರು ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ. ಡಿ.ವಿ. ಪರಮಶಿವಮೂರ್ತಿ ಅಭಿಪ್ರಾಯ ವ್ಯಕ್ತಪಡಿಸಿದರು.

ಕನ್ನಡ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಬುಧವಾರ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ಮಹಾತ್ಮ ಗಾಂಧೀಜಿ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ಕಾಲಕ್ರಮೇಣ ನಾವು ಆದರ್ಶ ವ್ಯಕ್ತಿಗಳನ್ನು ಮರೆಯುತ್ತಾ ಬಂದಿದ್ದೇವೆ. ಗಾಂಧೀಜಿ ಅವರ ಸರಳ ಹಾಗೂ ಮಾದರಿ ಜೀವನವನ್ನು ರೂಢಿಸಿಕೊಳ್ಳಬೇಕು. ನಮ್ಮಲ್ಲಿ ಬಡತನ ಭ್ರಷ್ಟಾಚಾರ ಅತಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಹಿಂಸಾಚಾರವೆಂಬುದು ಮಾನವ ಕುಲವೇ ನಲುಗುವಂತೆ ಮಾಡುತ್ತಿದೆ. ಇಂದು ನಾವು ಸ್ವಾರ್ಥ ಸಾಧನೆಯಲ್ಲಿ ಬದುಕುತ್ತಿದ್ದೇವೆ. ನಾವು ಇನ್ನೊಬ್ಬರ ಜೀವನದಲ್ಲಿ ಕಂಠಕವಾಗಿ ಬದುಕಬಾರದು ಎಂದರು.




ಗಾಂಧೀಜಿಯವರ ಆತ್ಮಶಕ್ತಿ ಮತ್ತು ದೇಶದ ಯುವ ಶಕ್ತಿಯೊಂದಿಗೆ ರಾಮ ರಾಜ್ಯದ ಕನಸು ನನಸಾಗಲಿ ಎಂದು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿ ಸ್ವಚ್ಛ ಭಾರತ ಅಭಿಯಾನ ಕಾರ್ಯಕ್ರಮದಲ್ಲಿ ಪ್ರಯುಕ್ತ ಮಾನ್ಯ ಕುಲಪತಿಗಳಾದ ಡಾ.ಡಿ.ವಿ. ಪರಮಶಿವಮೂರ್ತಿ ಅವರು ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಸ್ವಚ್ಛತಾ ಅಭಿಯಾನದಲ್ಲಿ ಆವರಣ ದಲ್ಲಿನ ಪ್ಲಾಸ್ಟಿಕ್ ಮುಕ್ತಗೊಳಿಸಲು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಡೀನರಾದ ಡಾ. ಎಫ್.ಟಿ. ಹಳ್ಳಿಕೇರಿ, ಡಾ. ಚಲುವರಾಜು, ಡಾ. ಶೈಲಜ ಇಂ. ಹಿರೇಮಠ ಅಧ್ಯಯನಾಂಗದ ನಿರ್ದೇಶಕರಾದ ಡಾ. ಅಮರೇಶ್ ಯತಗಲ್, ಎನ್‌ಎಸ್‌ಎಸ್ ಘಟಕದ ಸಂಯೋಜನಾಧಿ ಕಾರಿಗಳಾದ ಡಾ.ಎ.ಶ್ರೀಧರ್, ಉಪಕುಲಸಚಿವರಾದ ಡಾ.ಎ.ವೆಂಕಟೇಶ, ಆಡಳಿತ ಅಧಿಕಾರಿಗಳು, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.






## ಮೈಕ್ರೋ ನ್ಯೂಸ್

### ಗುರುದೇವ ಶಾಲಾ ವಿದ್ಯಾರ್ಥಿಗಳು ಚದುರಂಗ ಸ್ಪರ್ಧೆಗೆ ರಾಜ್ಯ ಮಟ್ಟಕ್ಕೆ ಆಯ್ಕೆ

**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಗುರುದೇವ ಆಂಗ್ಲ ಮಾಧ್ಯಮ ಪ್ರೌಢಶಾಲಾ ವಿದ್ಯಾರ್ಥಿಗಳು ಜಿ ಯಶವಂತ, ಯುಬಿ ವಿನಯ್, ದೀಕ್ಷಿತ್ ಕುಮಾರ್ ಎಸ್. ಚದುರಂಗ ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ. ವಿದ್ಯಾರ್ಥಿಗಳ ಸಾಧನೆಗೆ ಮುಖ್ಯೋಪಾಧ್ಯಾಯ ಕೆ.ಪ್ರಕಾಶ್ ಹಾಗೂ ಶಿಕ್ಷಕ ವೃಂದ ಸಂತಸ ವ್ಯಕ್ತಪಡಿಸಿ ವಿಭಾಗ ಮಟ್ಟದಲ್ಲೂ ಜಯಸಿ ಎಂದು ಶುಭ ಹಾರೈಸಿದರು.

### ಜಿಲ್ಲಾಪಂಚಾಯತ್ ಕಚೇರಿ ಆವರಣದಲ್ಲಿ ಸ್ವಚ್ಛತಾ ಶ್ರಮದಾನ



**ಹಂಪಿ ಟೈಮ್ಸ್ ಬಳ್ಳಾರಿ**

ಮಹಾತ್ಮ ಗಾಂಧಿಜೀಯವರ ಜಯಂತಿ ಹಾಗೂ ಸ್ವಚ್ಛಾತಾ ಹೀ ಸೇವಾ ಅಂಗವಾಗಿ ಬಳ್ಳಾರಿ ಜಿಲ್ಲಾ ಪಂಚಾಯತಿ ಕಚೇರಿ ಆವರಣದಲ್ಲಿ ಬುಧವಾರದಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಜಿಲ್ಲಾಧ್ಯಕ್ಷ ಕೆ.ಇ.ಚಿದಾನಂದ ಇವರ ನೇತೃತ್ವದಲ್ಲಿ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಜಿಪಂ ಉಪ ಕಾರ್ಯದರ್ಶಿ ಗಿರಿಜಾ ಶಂಕರ್, ಮುಖ್ಯಯೋಜನಾಧಿಕಾರಿ ವಾಗೀಶ್ ಶಿವಕುಮಾರ್ ಸೇರಿದಂತೆ ಯೋಜನಾ ನಿರ್ದೇಶಕರು, ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಚೇರಿಯ ಎಲ್ಲಾ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

### ಸ್ವಚ್ಛತೆಯ ಮಹತ್ವ ಕುರಿತು ಜಾಗೃತಿ ಇರಲಿ: ಮೇಯರ್ ಮುಲ್ಲಂಗಿ ನಂದೀಶ್



**ಹಂಪಿ ಟೈಮ್ಸ್ ಬಳ್ಳಾರಿ**

ಪರಿಸರ ಸ್ವಚ್ಛ ಇದ್ದಾಗ ಮಾತ್ರ ಆರೋಗ್ಯವಾಗಿ ಜೀವಿಸಲು ಸಾಧ್ಯವಾಗಿದ್ದು, ಸಾರ್ವಜನಿಕರಿಗೆ ಶುಚಿತ್ವದ ಮಹತ್ವ ಕುರಿತು ಜಾಗೃತಿ ಹೊಂದಬೇಕು ಎಂದು ಮಹಾನಗರ ಪಾಲಿಕೆಯ ಮೇಯರ್ ಮುಲ್ಲಂಗಿ ನಂದೀಶ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ವತಿಯಿಂದ ನಗರದ ಹೆಚ್.ಆರ್ ಗವಿಯಪ್ಪ ವೃತ್ತದ >>4

# ಜಿಲ್ಲಾಡಳಿತದಿಂದ ಶ್ರಮದಾನ ಪ್ರತಿಜ್ಞಾವಿಧಿ ಸ್ವೀಕಾರ

## ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ್ ಅವರಿಂದ ಪ್ರತಿಜ್ಞಾ ಬೋಧನೆ




**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನಗರಸಭೆ ಸೇರಿದಂತೆ ವಿವಿಧ ಇಲಾಖೆಗಳ ಆಶ್ರಯದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 155ನೇ ಹಾಗೂ ಲಾಲಬಹದ್ದೂರ ಶಾಸ್ತ್ರೀಜಿಯವರ 121ನೇ ಜನ್ಮ ದಿನಾಚರಣೆ ಕಾರ್ಯಕ್ರಮವು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಆಚರಿಸಲಾಯಿತು. ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮನೋಹರ್ ಪ್ರತಿಜ್ಞಾ ಬೋಧಿಸಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಪಂ ಸಿಇಒ ಎನ್ ಎಂ ಅಲಿ ಅಕ್ರಂ ಶಾ, ಅಪರ ಜಿಲ್ಲಾಧಿಕಾರಿ ಇ ಬಾಲಕೃಷ್ಣಪ್ಪ, ಸಹಾಯಕ ಆಯುಕ್ತ ವಿವೇಕಾನಂದ ಪಿ, ಜಿಪಂ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಲೀಂ ಪಾಶಾ, ನಗರಸಭೆಯ ಪೌರಾಯುಕ್ತ ಚಂದ್ರಪ್ಪ ಸಿ., ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಮಂಜುನಾಥ ಹೆಚ್.ಎಸ್., ಹೊಸಪೇಟೆ ತಹಸೀಲ್ದಾರರಾದ ಶೃತಿ ಎಂ.ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ಧಲಿಂಗೇಶ ಕೆ ರಂಗಣ್ಣನವರ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗಿಯಾಗಿದ್ದರು. ಜಯಂತಿ ಹಿನ್ನೆಲೆಯಲ್ಲಿ ನಗರಸಭೆ, ನಗರಾಭಿವೃದ್ಧಿ ಕೋಶದ ಸಹಯೋಗದಲ್ಲಿ ಸ್ವಚ್ಛತಾ ನಡಿಗೆ ಕಾರ್ಯಕ್ರಮ ನಡೆಯಿತು. ನಂತರ ಸ್ವಚ್ಛತಾ ಶ್ರಮದಾನದಲ್ಲಿ ಭಾಗಿಯಾದರು.



ತಹಸೀಲ್ದಾರರಾದ ಶೃತಿ ಎಂ.ಎಂ ಮಹನೀಯರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದರು.



ಹೊಸಪೇಟೆ ವಾರ್ತಾ ಇಲಾಖೆಯ ಕಚೇರಿಯಲ್ಲಿ ಪ್ರಥಮ ದರ್ಜೆ ಸಹಾಯಕ ಕೆ.ರಾಮಾಂಜನೇಯ, ಹಿರಿಯ ವಾಹನ ಚಾಲಕ ಪಿ.ಕೃಷ್ಣಸ್ವಾಮಿ, ಹೊರಗುತ್ತಿಗೆ ನೌಕರರಾದ ಆರೀಫ್ ಅಹ್ಮದ್, ತಾಯೇಶ್.ಜಿ ಇತರರು ಮಹನೀಯರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಿದರು.


### ಹಂಪಿಯಲ್ಲಿ ಶಕ್ತಿ ದೇವತೆಗಳ ಆರಾಧನೆ

ಪುಟ–4ರಲ್ಲಿ

### ಸುಡು ಮರುಭೂಮಿಯಲ್ಲಿ ತಂಪಾದ ಹೂಹಣ್ಣು

ಪುಟ–2ರಲ್ಲಿ

# ಎಂ.ಎಸ್.ಪಿ.ಎಲ್ ಎಚ್.ಕೆ.ರಮೇಶ್‌ಗೆ ಮಹಾತ್ಮ ಗೌರವ ಪ್ರಶಸ್ತಿ ಪ್ರಧಾನ




**ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಎಂ ಎಸ್ ಪಿ ಎಲ್ ಲಿಮಿಟೆಡ್ ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ವಿಭಾಗದ ಉಪಾಧ್ಯಕ್ಷ ಎಚ್ ಕೆ ರಮೇಶ್ ಅವರಿಗೆ, ಅವರ ಸಾಮಾಜಿಕ ನಾಯಕತ್ವ ಮತ್ತು ಸಮಾಜದ ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ, 2024 ನೇ ವರ್ಷದ ಪ್ರತಿಷ್ಠಿತ ಮಹಾತ್ಮ ಪುರಸ್ಕಾರವನ್ನು ದೆಹಲಿಯಲ್ಲಿ ಬುಧವಾರ ನೀಡಿ ಗೌರವಿಸಲಾಯಿತು. ಮಾಜಿ ಐ ಪಿ ಎಸ್ ಅಧಿಕಾರಿಕಾರಿ ಕಿರಣ್ ಬೇಡಿ ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಿದರು.

# ಶಟಲ್ ಬ್ಯಾಡ್ಮಿಂಟನ್ ಸ್ಪರ್ಧೆ ಜಿಲ್ಲಾ ಮಟ್ಟದಿಂದ ವಿಭಾಗ ಮಟ್ಟಕ್ಕೆ ಆಯ್ಕೆ

**ಹಂಪಿ ಟೈಮ್ಸ್ ಕೊಟ್ಟೂರು**

ಪಟ್ಟಣದ ಗುರುದೇವ ಆಂಗ್ಲ ಮಾಧ್ಯಮ ಪ್ರೌಢಶಾಲಾ ವಿದ್ಯಾರ್ಥಿಗಳು ಅರುಣೋದಯ ಬಿ ವೈ ,ಡಿ. ಎಂ ದಿಲೀಪ್, ಬಿ ಎಂ ಗುರುಬಸವರಾಜ ಟಿ ಆರ್ ದಿಗಂತ್, ಗೌತಮ್ ಎಂ ಹುಡೇದ್ ಇವರು ಶಟಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ಭಾಗವಹಿಸಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದು ಕಲ್ಬುರ್ಗಿ ವಿಭಾಗ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

ವಿದ್ಯಾರ್ಥಿಗಳಿಗಳ ಸಾಧನೆಗೆ ಶಾಲೆಯ ಮುಖ್ಯೋಪಾಧ್ಯಾಯರು ಕೆ.ಪ್ರಕಾಶ್ ಹಾಗೂ ಶಿಕ್ಷಕ ವೃಂದ ಸಂತಸ ವ್ಯಕ್ತಪಡಿಸಿ ವಿಭಾಗ ಮಟ್ಟದಲ್ಲೂ ಜಯಸುವಂತೆ ಶುಭ ಹಾರೈಸಿದರು.



# ಸ್ವಚ್ಛ ಭಾರತದ ಕನಸು ನನಸಾಗಿಸಲು ಕೈಜೋಡಿಸಿ

## ನಗರಸಭೆ ಉಪಾಧ್ಯಕ್ಷ ರಮೇಶ ಗುಪ್ತ ಹೇಳಿಕೆ | ರಾಜೀವ್‌ನಗರ ಕ್ಷೇಮಾಭಿವೃದ್ಧಿ ಸಂಘದಿಂದ ಸ್ವಚ್ಛತಾ ಕಾರ್ಯ





**ಹಂಪಿ ಟೈಮ್ಸ್ ಹೊಸಪೇಟೆ**

ಸ್ವಚ್ಛ ಭಾರತದ ಕನಸನ್ನು ಮೊದಲಿಗೆ ಕಂಡವರು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ. ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಮೂಲಕ ನೈರ್ಮಲ್ಯದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಗಾಂಧೀಜಿಯವರ ಪರಿಕಲ್ಪನೆ ಇಂದು ನನಸಾಗ ಬೇಕಾಗಿದೆ ಎಂದು ನಗರಸಭೆ ಉಪಾಧ್ಯಕ್ಷ ರಮೇಶ ಗುಪ್ತಾ ಹೇಳಿದರು.

ನಗರದ ರಾಜೀವ್‌ನಗರ ಕ್ಷೇಮಾಭಿವೃದ್ಧಿ ಸಂಘ ರಾಜೀವ್‌ನಗರದ ಉದ್ಯಾನವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ಆಚರಣೆ, ಸ್ವಚ್ಛ ಭಾರತ್ ಕಾರ್ಯಕ್ರಮ ಅಧ್ಯಕ್ಷತೆವಹಿಸಿ ಮಾತನಾಡಿದರು. ಗಾಂಧೀಜಿಯ ಕನಸು ನನಸಾಗಿಸಲು ಪ್ರತಿಯೊಬ್ಬರೂ ಸ್ವಚ್ಛತೆಗೆ ಕೈಜೋಡಿಸಬೇಕು. ಸ್ವಚ್ಛತೆ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಆದ್ಯಕರ್ತವ್ಯವಾಗಿದೆ. ಸ್ವಚ್ಛತೆ ಮೈಮರತರೆ ಅನಾರೋಗ್ಯ ನಮ್ಮನ್ನೇ ಕಾಡುತ್ತದೆ ಎಂಬ ತಿಳುವಳಿಕೆ ನಮ್ಮೊಳಗಿರಬೇಕು. ಜನರು ರಸ್ತೆಗೆ ಕಸ ಎಸೆಯದೆ ನಗರಸಭೆ ವಾಹನಗಳಿಗೆ ನೀಡಬೇಕು ಎಲ್ಲರ ಸಹಕಾರದೊಂದಿಗೆ ನಗರದ ಉದ್ಯಾನವನಗಳು ಸೇರಿದಂತೆ ನಗರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಕಿರ್ಲೋಸ್ಕರ್ ಫೆರಸ್ ಇಂಡ್ರಸ್ಟ್ರೀಸ್ ಲಿಮಿಟೆಡ್ ಕಾರ್ಯ ನಿರ್ವಾಹಕ ಉಪಾಧ್ಯಕ್ಷ ಪಿ ನಾರಾಯಣ ಮಾತನಾಡಿ, ಸ್ವಚ್ಛತೆ ಇರುವ ತಾಣಗಳು ಮನಸ್ಸಿಗೆ ನೆಮ್ಮದಿ ತರುತ್ತವೆ. ಹಾಗಾಗಿ ಜನರು ಸ್ವಚ್ಚತೆ ಇರುವ ಪ್ರದೇಶಗಳನ್ನ ಹುಡುಕಿಕೊಂಡು ಪ್ರವಾಸ ಹೋಗುತ್ತಾರೆ. ಕಣ್ಣಿಗೆ ಮುದ ನೀಡುವಂತ ಪರಿಸರ ನಮ್ಮ ಸುತ್ತಮುತ್ತ ನಿರ್ಮಿಸಿಕೊಳ್ಳುವುದು ನಮ್ಮ ಜವಾಬ್ದಾರಿಯೂ ಆಗಿದೆ ಎಂದುದನ್ನು ಯಾರೂ ಮರೆಯಬಾರದು ಎಂದರು. ಕಿರ್ಲೋಸ್ಕರ್ ಫೆರಸ್ ಇಂಡ್ರಸ್ಟ್ರೀಸ್ ಲಿಮಿಟೆಡ್ ಎಚ್.ಆರ್. ಸೀನಿಯರ್ ಜನರಲ್ ಮ್ಯಾನೇಜರ್ ಬಿ ಚಂದ್ರಶೇಖರ ಉಪಸ್ಥಿತರಿದ್ದರು. ಕಿರ್ಲೋಸ್ಕರ್ ಫೆರಸ್ ಇಂಡ್ರಸ್ಟ್ರೀಸ್ ಲಿಮಿಟೆಡ್ ಮುಖ್ಯ ಅಧಿಕಾರಿಗಳು ಮತ್ತು ಲೇಡೀಸ್ ಕ್ಲಬ್ ಸದಸ್ಯರು, ರಾಜೀವ್ ನಗರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಗೋಪಾಲ ಕಟಿಗಿ, ಕಾರ್ಯದರ್ಶಿ ಆರ್. ಈಶ್ವರನ್ ಮತ್ತು ಪದಾಧಿಕಾರಿಗಳು ಹಾಗೂ ರಾಜೀವ ನಗರದ ನಿವಾಸಿಗಳು ಉದ್ಯಾನವನ ಹಾಗೂ ಸುತ್ತಮುತ್ತ ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸಿದ್ದರು.

ಹಂಪಿ ಟೈಮ್ಸ್ HAMPI TIMES

# ನ್ಯಾಯಲಯಗಳಲ್ಲಿ ನ್ಯಾಯ ಸಿಗದೇ ಹೋಗಬಹುದು. ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳಬೇಕು : ಸಿ.ಎಂ.ಸಿದ್ದರಾಮಯ್ಯ



**ಹಂಪಿ ಟೈಮ್ಸ್ ಬೆಂಗಳೂರು**

ಎಲ್ಲಾ ನ್ಯಾಯಾಲಯಗಳಿಗಿಂತ ಮೇಲೆ ಅತ್ಯುನ್ನತವಾದ ಆತ್ಮಸಾಕ್ಷಿಯ ನ್ಯಾಯಾಲಯವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹಾತ್ಮ ಗಾಂಧಿಯವರ ಮಾತನ್ನು ಪುನರುಚ್ಚರಿಸಿದರು. ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು. ಈಗಿನ ನ್ಯಾಯಲಯಗಳಲ್ಲಿ ನ್ಯಾಯ ಸಿಗದೇ ಹೋಗಬಹುದು. ಈಗಿನ ನ್ಯಾಯಾಲಯಗಳಿಂದ ಎಲ್ಲರಿಗೂ ನ್ಯಾಯ ಸಿಗದೇ ಹೋಗಬಹುದು. ಆದರೆ ನಾವು ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಯಾರಾದರೂ ಹೊಗಳಲಿ, ತೆಗಳಲಿ. ಟೀಕೆ ಮಾಡಲಿ, ಬಿಡಲಿ. ಉಳಿದವರು ಗುರುತಿಸಲಿ ಬಿಡಲಿ ನಾವು ಪ್ರತಿಯೊಬ್ಬರೂ ಆತ್ಮಸಾಕ್ಷಿಯ ನ್ಯಾಯಾಲಯದಲ್ಲಿ ಆತ್ಮಸಾಕ್ಷಿಗೆ ತಕ್ಕಂತೆ ನಡೆದುಕೊಳ್ಳಬೇಕು ಎಂದರು.

ಕೇವಲ ಭಾಷಣದಿಂದ ಮಹಾತ್ಮಗಾಂಧಿ ಮತ್ತು ಅಂಬೇಡ್ಕರ್ ಅವರ ಆಶಯಗಳು ಈಡೇರುವುದಿಲ. ಇವರಿಬ್ಬರ ಬದುಕಿನ ಮೌಲ್ಯ ಮತ್ತು ಸಂದೇಶಗಳನ್ನು ಜನ ಮಾನಸದಲ್ಲಿ ವಿಸ್ತರಿಸುತ್ತಲೇ ಸರ್ಕಾರ ಸಮ ಸಮಾಜ ನಿರ್ಮಿಸಲು ಪೂರಕವಾದ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ನಾನು ಮತ್ತು ನಮ್ಮ ಸರ್ಕಾರ ಈ ದಿಕ್ಕಿನಲ್ಲಿ ಸಾಗುತ್ತಿದ್ದೇವೆ ಎಂದರು.

ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಅತ್ಯಂತ ಪ್ರಾಮಾಣಿಕ ನಾಯಕರು ಮತ್ತು ರಾಜಕಾರಣಿ. ಇವರೆಲ್ಲರ ಬದುಕಿನ ಸಂದೇಶಗಳು ನಮಗೆ ಮಾರ್ಗದರ್ಶನವಾದರೆ, ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದರೆ ನಾವು ಈ ಮಹಾತ್ಮರಿಗೆ ಸಲ್ಲಿಸುವ ಗೌರವ ಎಂದರು.

ಗಾಂಧಿಯವರ ಹೋರಾಟದಿಂದಾಗಿ ನಾವು ಸ್ವಾಂತ್ರ್ಯದ ಗಾಳಿ ಸೇವಿಸುತ್ತಿದ್ದೇವೆ. ಗಾಂಧಿ ಇಡೀ ಜಗತ್ತಿನ ನಾಯಕರು ಎನ್ನುವ ಗೌರವ ಸಿಕ್ಕಿರುವ ಭಾರತೀಯರಿಗೆ ಸಿಕ್ಕ ಹೆಗ್ಗಳಿಕೆ ಎಂದರು.

ಕಾನೂನು ಸಚಿವರಾದ ಹೆಚ್.ಕೆ.ಪಾಟೀಲ್, ಗಾಂಧಿ ಭವನ ಕಾರ್ಯದರ್ಶಿ ವಿಶುಕುಮಾರ್, "ಎಲ್ಲರ ಗಾಂಧಿ" ಕೃತಿಯ ಲೇಖಕರಾದ ನಟರಾಜ್ ಹುಳಿಯಾರ್ ಸೇರಿ ಹಲವು ಸಾಧಕರು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ.
ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಸುಡು ಮರುಭೂಮಿಯಲ್ಲಿ ತಂಪಾದ ಹೂಹಣ್ಣು

ದಿಗಂತದ ತನಕ ಮೈಚಾಚಿರುವ ಗೋಧಿಬಣ್ಣದ ಮರುಭೂಮಿ; ಅದರ ಬೈತಲೆ ತೆಗೆದಂತೆ, ನಡುಗೆರೆಯೋಪಾದಿಯಲ್ಲಿ ನೇರವಾಗಿ ಸಾಗುವ ನೂರಾರು ಕಿಮೀ ಫಾಸಲೆಯ ರಸ್ತೆ; ಸಾಲುಮರಗಳಿಲ್ಲದ ರಸ್ತೆಯ ಎರಡೂ ಬದಿ ಕಾವಲು ನಿಂತ ಬೋಳುಬೆಟ್ಟಗಳು; ಆಗಾಗ್ಗೆ ತಟ್ಟನೆ ದರ್ಶನಕೊಟ್ಟು ಚಕಿತಗೊಳಿಸುವ ನೀಲಗಡಲು; ನೆಲದ ಮೇಲೆ ಕಳೆಯಂತೆ ಬೆಳೆದ ಕುರುಚಲು ಪೊದೆ; ಸಾಗರದಲೆಗಳಂತೆ ಹರಡಿದ ನಿಶ್ಚಲ ನಿರ್ಲಿಪ್ತ ಉಸುಕು; ಓಯಸಿಸ ಆಸುಪಾಸುಗಳಲ್ಲಿ ಕಾಣುವ ನೀರು ಮತ್ತು ಖರ್ಜೂರದ ತೋಪು; ಅಲ್ಲಲ್ಲಿ ಮೇಯುವ ಒಂಟೆ-ಕುರಿಗಳ ಹಿಂಡು-ಇದು ಇರಾಕ್ ಇರಾನ್ ಅರೇಬಿಯಾ ಜೋರ್ಡಾನುಗಳಲ್ಲಿ ಎದ್ದುಕಾಣುವ ಭೌಗೋಳಿಕ ಮೇಲ್ಮೈ. ಇರಾಕಿನಲ್ಲಿ ಮಾತ್ರ ಹಾದಿಯಲ್ಲಿ ಯೂಫ್ರಟೀಸ್-ಟ್ರಿಗ್ರಿಸ್ ಹೊಳೆಗಳು ಎಡತಾಕುತ್ತವೆ. ಈ ನದಿಗಳು ಆಳವಾಗಿ ಕಲರವವಿಲ್ಲದೆ ನಿಶ್ಶಬ್ದ ಹರಿಯುತ್ತವೆ. ಶುಷ್ಕಮರುಭೂಮಿಯಲ್ಲಿ ಪೈರುಪಚ್ಚೆಯನ್ನೂ ಹಣ್ಣುಹೂವನ್ನು ಬೆಳೆಸಿ ಸಾವಿರಾರು ಕಿಮೀ ಹರಿದು ಪರ್ಶಿಯನ್ ಕೊಲ್ಲಿಯನ್ನು ಸೇರುತ್ತವೆ.



ನಾನು-ಬಾನು, ಇರಾಕಿನ ಬಗ್ದಾದಿನಿಂದ ಬಸ್ರಾ, ಇರಾನಿನ ತೆಹರಾನಿನಿಂದ ಖೋಮ್, ಮಶಾದಿನಿಂದ ತೆಹರಾನ್, ಅರೇಬಿಯಾದಲ್ಲಿ ತಾಯಿಫಾದಿಂದ ಮೆಕ್ಕಾ-ಮದೀನ, ರಿಯಾದಿನಿಂದ ದಮ್ಮಂ ಮೊದಲಾದ ನಿಡಿದಾದ ಹಾದಿಗಳಲ್ಲಿ ಪಯಣಿಸಿದೆವು; ಓಯಸಿಸ್ ಮತ್ತು ನದಿ ಪ್ರದೇಶಗಳಲ್ಲಿ ಹಣ್ಣಿನ ತೋಟಗಳನ್ನು ಕಂಡೆವು. ರಸ್ತೆಬದಿಯ ಅಂಗಡಿಗಳಲ್ಲಿ ಕಲ್ಲಂಗಡಿ ಕರಬೂಜ ಅನಾನಸು ದ್ರಾಕ್ಷಿ ಸೇಬು ಅಂಜೂರ ಮೋಸಂಬಿ ಕಿಕ್ಕಿರಿದಿದ್ದವು. ನಮಗೆ ಕಾಣದೆ ಹೋಗಿದ್ದು ಪಪಾಯಿ ಸೀಬೆ ಮಾವು. ರೈತರು ತೋಟಗಳ ಬದಿ ಹಣ್ಣಿನ ರಾಶಿಯಿಟ್ಟುಕೊಂಡು ಚಲಿಸುವ ವಾಹನಿಗರನ್ನು ಕರೆಯುತ್ತಿದ್ದರು; ಹಳ್ಳಿಯ ಸಂತೆಗಳಲ್ಲಿ ಬೈಕಿಗೆ ಲಗತ್ತಾದ ಕೈಗಾಡಿಯಲ್ಲಿ ತಂದು ಮಾರುತ್ತಿದ್ದರು. ಪಟ್ಟಣದ ಮಾರುಕಟ್ಟೆಗಳಲ್ಲಿ ಅಕ್ರೋಟ ಬಾದಾಮಿ ಖರ್ಜೂರ ಒಣದ್ರಾಕ್ಷಿಯ ಗೋದಾಮುಗಳು ಸಾಲುಸಾಲು. ಕೆಲವರು ಹಣ್ಣಿನ ಜತೆ ಒಣಗಿದ ಗಸಗಸೆಯ ಕಾಯನ್ನೂ ಇಟ್ಟಿದ್ದರು. ಖರ್ಜೂರದ ಸುಳಿಗರ್ಭವನ್ನು ಗಿಣ್ಣದಂತೆ ಕತ್ತರಿಸಿ ಕೊಡುತ್ತಿದ್ದರು. ಮರುಭೂಮಿಯಲ್ಲಿ ಇಷ್ಟೊಂದು ಹಣ್ಣು ಹಂಪಲು ಹೇಗೆ ಸಾಧ್ಯ ಎಂದು ಸೋಜಿಗವಾಗುತಿತ್ತು.

ನಾವು ಇರಾಕ್-ಇರಾನುಗಳಿಗೆ ಹೋದಾಗ ಚಳಿಗಾಲ ಇನ್ನೇನು ಶುರುವಾಗುತ್ತಿತ್ತು. ನದಿಗಳ ದಯೆಯೆಂದಲೊ ಚಳಿಗಾಲದ ತಂಪಿನಿಂದಲೊ ಹೊಲದೋಟಗಳು ಭರಪೂರ ಫಲ ತಳೆದಿದ್ದವು. ಬಹುಶಃ ಹಣ್ಣುಗಳ ಋತುವಿರಬೇಕು. ಇರಾಕಿನಲ್ಲಿ ಹೆಚ್ಚಿನ ಹಣ್ತೋಟಗಳು ಮೊಸುಲ್ ಪಟ್ಟಣದ ಹಾದಿಯಲ್ಲಿ ಎದುರಾದವು. ಬ್ಯಾಬಿಲೋನಿಯಾದಲ್ಲಿ ಹಿಲ್ಲಾ ಬೆಟ್ಟದ ಸುತ್ತ, ಖರ್ಜೂರದ ತೋಟಗಳು ದಿಗಂತದವರೆಗೂ ಸಮುದ್ರೋಪಾದಿಯಲ್ಲಿ ಹಬ್ಬಿದ್ದವು. ಅಝುರಬೈಜಾನಿನ ಕಾಕಸಸ್ ಪರ್ವತಗಳ ಕೆಳಭಾಗದಲ್ಲಿ, ಗಬಾಲಾ ನಗರದ ಆಸುಪಾಸು, ಹಾದಿಯುದ್ದಕ್ಕೂ ದ್ರಾಕ್ಷಿ ಸೇಬು ಬದಾಮಿ ಅಕ್ರೋಟದ ತೋಟಗಳಿದ್ದವು. ಇಷ್ಟು ಸಾಲದೆಂಬಂತೆ ಜನ ಮನೆಯ ಮುಂದಿನ ಚಪ್ಪರದಲ್ಲಿ, ಗೋಡೆಯ ಮೇಲೆ, ದ್ರಾಕ್ಷಿಬಳ್ಳಿ ಹಬ್ಬಿಸುವ ಪದ್ಧತಿಯಿದೆ. ಕೈತೋಟದಲ್ಲಿ ಹಣ್ಣಿನ ಗಿಡಗಳಂತೂ ಕಡ್ಡಾಯ. ಇರಾನಿನಲ್ಲಿ ಕೈದೋಟಗಳ ಸುತ್ತ ಮಣ್ಣಿನ ಗೋಡೆಯನ್ನು ಎಬ್ಬಿಸಲಾಗಿತ್ತು. ಹೊಲಗಳಲ್ಲಿ ಮಹಿಳೆಯರು ಗುದ್ದಲಿ ಹಿಡಿದು ಅಗತೆ ಮಾಡುವ, ಕುರಿ ಒಂಟೆ ಕಾಯುವ, ನೀರುಣಿಸುವ, ಹಣ್ಣು ಹೂವು ಬಿಡಿಸುವ ದೃಶ್ಯಗಳ್ಲು ಕಾಣುತ್ತಿದ್ದವು.




ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಮರುಭೂಮಿಯ ಕಲ್ಪವೃಕ್ಷ ಖರ್ಜೂರವಾದರೆ ಕಲ್ಪಲತೆ ದ್ರಾಕ್ಷಿ. ಪ್ರಕೃತಿ ತನ್ನ ಸೆರಗಿನಲ್ಲಿ ಬದುಕುವ ಜನರಿಗೆ ಪ್ರಾಣಿಪ್ರಕ್ಷಿಗಳಿಗೆ ಫಲಪುಷ್ಪಗಳನ್ನು ಕಾಯಿಪಲ್ಲೆಯನ್ನು ಉದಾರವಾಗಿ ದಯಪಾಲಿಸಿತ್ತು. ಹಣ್ಣಿನ ತೋಟಗಳಿರುವಲ್ಲಿ ಹಕ್ಕಿಗಳ ಕಲರವವಿತ್ತು. ಗುಬ್ಬಚ್ಚಿಗಳು ಖರ್ಜೂರದ ಮರದಲ್ಲಿ ಗಲಭೆ ಎಬ್ಬಿಸುತ್ತಿದ್ದವು. ರಸ್ತೆಬದಿಯ ಖರ್ಜೂರದ ಗಿಡಗಳಿಂದ ಬಿದ್ದ ಮತ್ತು ಹಕ್ಕಿಗಳು ಸೂರೆಹೊಡೆದ ಹಣ್ಣು, ವಾಹನಗಳ ಚಕ್ರಕ್ಕೆ ಸಿಕ್ಕಿ ಹುಣಸೆಹಣ್ಣು ಮೆತ್ತಿದಂತೆ ರಸ್ತೆಯನ್ನು ಅಂಟಾಗಿಸಿತ್ತು.

ಮರುಭೂಮಿಯ ನೆಲಗುಣವೆಂದು ತೋರುತ್ತದೆ- ಅಲ್ಲಿನ ಹಣ್ಣುಗಳ ರುಚಿಯಲ್ಲಿ ವಿಶಿಷ್ಟ ಸ್ವಾದವಿತ್ತು. ದ್ರಾಕ್ಷಿಗಳಲ್ಲಿ ಆರು ತಳಿಗಳು; ಸೇಬುಗಳಲ್ಲಿ ಹತ್ತಕ್ಕಿಂತ ಹೆಚ್ಚು ಜಾತಿಯವು. ಟರ್ಕಿಸೇಬು ತುಸು ದುಬಾರಿ. ದಾಳಿಂಬೆ ತೆಂಗಿನಕಾಯಿ ಗಾತ್ರ. ಕಲ್ಲಂಗಡಿ ಒಬ್ಬ ಆಳು ಕಷ್ಟಪಟ್ಟು ಎತ್ತಬೇಕು. ಅಗ್ಗದ ಹಣ್ಣೆಂದರೆ ಹಳದಿ ಫುಟ್‌ಬಾಲಿನಂತಹ ಸಿಹಿಸೌತೆ ಮತ್ತು ಕರಬೂಜ. ಕಪ್ಪುಅಂಜೂರ ನಮ್ಮಹಸಿರುಅಂಜೂರಕ್ಕಿಂತರುಚಿಕರವಾಗಿತ್ತು. ಅಝುರ್‌ಬೈಜಾನಿನ ಕರಬೂಜಾ ಮತ್ತು ಕಲ್ಲಂಗಡಿಗಳು ಸಕ್ಕರೆ ಪಾಕದಲ್ಲಿ ಅದ್ದಿದಂತಿದ್ದವು. ಇಲ್ಲಿನ ರಾಷ್ಟ್ರೀಯ ಫಲ ದಾಳಿಂಬೆ. ದಾಳಿಂಬೆಯ ನಾನಾ ವಿನ್ಯಾಸದ ಪ್ರತಿಕೃತಿಗಳು ಅಂಗಡಿಗಳಲ್ಲಿ ಮಾರಾಟಕ್ಕಿದ್ದವು. ಸೀಜನಲ್ಲದ ಕಾರಣ ನಮಗೆ ದಾಳಿಂಬೆ ಸಿಗಲಿಲ್ಲ. ಇಲ್ಲಿನ ಜನ ಕೂಡ ಹಣ್ಣುಬಾಕರು. ಊಟದಲ್ಲಿ ಹಸಿಹಣ್ಣು ಸೊಪ್ಪು ತರಕಾರಿಗಳನ್ನು ಯಥೇಚ್ಛ ಸ್ವೀಕರಿಸುವರು. ಬಿರಿಯಾನಿಯಲ್ಲಿ ಪಲಾವಿನಲ್ಲಿ ಪಾಯಸದಲ್ಲಿ ಚಹದಲ್ಲಿ ರೊಟ್ಟಿಯಲ್ಲಿ ಒಣಹಣ್ಣು ಸೇರಿಸುವರು.

ನಾವು ಉಪಹಾರಕ್ಕೆ ಊಟಕ್ಕೆ ಬೇಯಿಸಿದ ಪದಾರ್ಥ ಕಡಿಮೆ ಮಾಡಿ, ತಟ್ಟೆತುಂಬ ಹಣ್ಣು ತರಕಾರಿ ಬಡಿಸಿಕೊಂಡು ತಿನ್ನುತ್ತಿದ್ದವು. ಅಝುರ್‌ಬೈಜಾನ್ ಜೋರ್ಡಾನ್ ಈಜಿಪ್ಟ್ ಪ್ಯಾಲೆಸ್ತೈನ್‌ಗಳಲ್ಲಿ ಪಾಕಗೊಳಿಸಿದ ವಿವಿಧ ಆಲಿವ್ ಹಣ್ಣುಗಳು ಉಪ್ಪಿನಕಾಯಂತೆ ದೊರೆಯುತ್ತವೆ. ಇರಾಕ್ ಇರಾನಿನ ಹಣ್ಣಿನ ಅಂಗಡಿಯವರಾದರೂ ಉದಾರ. ರುಚಿ ನೋಡಲು ಹಣ್ಣುಗಳನ್ನು ತಾವಾಗಿ ಎತ್ತಿ ಕೊಡುತ್ತಾರೆ. ಕರ್ಬಲಾದಲ್ಲಿ ಯಾತ್ರಿಕರಿಗೆ ಉಚಿತವಾಗಿ ತಿನ್ನಲು ಅಂಗಡಿಯ ಮುಂದೆ ಖರ್ಜೂರದ ಕ್ರೇಟನ್ನೇ ಇಟ್ಟಿದ್ದರು. ಪ್ಯಾಲೆಸ್ತೈನಿನಲ್ಲಿ, ಜಗತ್ತಿನ ಪ್ರಾಚೀನ ನಗರವಾದ ಜೆರಿಕೊದಲ್ಲಿ ಬಸ್ಸಿನೊಳಗೆ ಬರುವ ಹುಡುಗರು ರಸಭರಿತ ಖರ್ಜೂರಗಳನ್ನು ತಿನ್ನಲು ಕೊಟ್ಟು, ನಮ್ಮ ಅಂಗಡಿಗೆ ಬನ್ನಿ ಎಂದು ಆಹ್ವಾನಿಸುತ್ತಿದ್ದರು. ಬಗ್ದಾದ್ ಪಟ್ಟಣದಲ್ಲಿ ಒಬ್ಬ ರೈತ ಸಂತೆಯಲ್ಲಿ ಒಟ್ಟಿಕೊಂಡಿದ್ದ ಒಣದ್ರಾಕ್ಷಿಯ ರಾಶಿಯಲ್ಲಿ ಒಂದನ್ನು ಎತ್ತಿಕೊಂಡೆ. ಆತ 'ಹಾಗಲ್ಲ' ಎಂದು ಹಿಡಿಯಷ್ಟು ಬಾಚಿ ನನ್ನ ಬೊಗಸೆ ತುಂಬಿದನು. ರಾಶಿಬಿದ್ದಿದ್ದ ಆಕ್ರೋಟದ ಪಟ ತೆಗೆಯಲು ಯತ್ನಿಸುತ್ತಿದೆ. ಅದನ್ನು ಮಾರುತ್ತಿದ್ದ ತರುಣನು, ಎರಡು ಅಕ್ರೋಟುಗಳನ್ನು ಕಟಿಂಗ್ ಪ್ಲೇಯರಿನಲ್ಲಿ ಪಟ್ಟನೆ ಒಡೆದು, ಒಳಗಿದ್ದ ಮೆದುಳಿನಾಕಾರದ ತಿರುಳನ್ನು ತೆಗೆದು ತಿನ್ನಗೊಟ್ಟನು. ಬಗ್ದಾದ್ ಬಸ್ರಾಗಳಲ್ಲಿ ಖರ್ಜೂರದ ಮಂಡಿಗಳಲ್ಲಿ ಸ್ಯಾಂಪಲ್ಲಿಗೆ ತಿನ್ನುತ್ತ ದಿನವಿಡೀ ತಿರುಗಬಹುದು. ನಾವು ಇಲ್ಲಿನ ಮಾರುಕಟ್ಟೆಗಳಿಗೆ ತಪ್ಪದೇ ಭೇಟಿ ಕೊಡುತ್ತಿದ್ದೆವು. ಅಲ್ಲಿ ಮಾಂಸ ಹಣ್ಣು ತರಕಾರಿ ಗಿಣ್ಣ ಜೇನುತುಪ್ಪ ಎಲ್ಲವೂ ಭೇದವಿಲ್ಲದೆ ಅಕ್ಕಪಕ್ಕ ಇರುವುದನ್ನು ಕಂಡೆವು. ಭಾರತದ ಮಾರುಕಟ್ಟೆಗಳಲ್ಲಿ ಅವುಗಳಿಗೆ ಪ್ರತ್ಯೇಕ ಜಾಗಗಳುಂಟು. ಆದರೆ ಭಾರತ ಮಾಲುಗಳು ಈ ಶ್ರೇಣೀಕರಣವನ್ನೂ ಒಡೆದುಹಾಕುತ್ತಿವೆ.





ಇರಾನಿನ ಮರುಭೂಮಿಯಲ್ಲಿ ಹಿಮದ ಶಾಲನ್ನು ಹೊದ್ದ ಪರ್ವತಗಳು ನಮ್ಮನ್ನು ಚಕಿತಗೊಳಿಸಿದವು. ಹಿಮ ಕರಗಿ ಕೆಳಸ್ತರಕ್ಕೆ ಹರಿದು ಹಣ್ಣಿನ ತೋಟಪಟ್ಟಿಗಳನ್ನು ಸೃಷ್ಟಿಸಿತ್ತು. ಕಾರಖಾನ್ ಎಂಬ ಪರ್ವತ ಬುಡದ ಊರಲ್ಲಿ ಹಿಮಕರಗಿದ ನೀರು ಊರೊಳಗೆ ರಭಸವಾಗಿ ಹರಿಯುತ್ತಿತ್ತು. ಇರಾನಿನ ಅನೇಕ ಸಂತರು ನೀರು ಬೆಟ್ಟದ ಮೇಲೆ ಚಿಲುಮೆ ಉಕ್ಕಿಸುವ ಪವಾಡ ಮಾಡಿದ ಕತೆಗಳಿವೆ. ಸೂಫೀಕವಿ ಅತ್ತಾರನ ಸಮಾಧಿಯಿರುವ ನಿಶಾಪುರದಲ್ಲಿ, ಇಂತಹದೊಂದು ಚಿಲುಮೆಯನ್ನು ನೋಡಿದೆವು. ಮರುಭೂಮಿಯಲ್ಲಿ ನೀರೇ ದೇವರು. ಹೀಗಾಗಿಯೇ ಇಲ್ಲಿನ ಶಿಲ್ಪಕಲೆಯಲ್ಲಿ ಯಥೇಚ್ಛ ನೀರಿನ ಹೂಜಿಗಳಿವೆ. ನೀರುಳ್ಳ ಚರ್ಮದ ಚೀಲ ಹೊತ್ತು ಬಾಯಾರಿದವರಿಗೆ ಹಂಚುವವರ ಪ್ರತಿಮೆಗಳಿವೆ. ಕುಡಿಯಲು ನೀರನ್ನು ಕೊಡದೆ ಹಸನರನ್ನು ಕೊಂದ ಕರ್ಬಲಾ ಕದನದ ಚರಿತ್ರೆಯು, ಬಾಯಾರಿದವರಿಗೆ ನೀರು ಕುಡಿಸುವುದನ್ನು, ಹಣ್ಣು ತಿನ್ನಿಸುವುದನ್ನು ಪವಿತ್ರ ಆಚರಣೆ?ಯಾಗಿಸಿದೆ. ಮರುಭೂಮಿ ದೇಶಗಳಲ್ಲಿರುವ ನದಿ ಓಯಸಿಸ್ ಹಿಮಪರ್ವತಗಳಿಗೂ, ಹಣ್ಣಿನ ತೋಟಗಾರಿಕೆಗೂ, ಹಣ್ಣಿನ ವ್ಯಾಪಾರ ಮತ್ತು ಅತಿಥಿ ಸತ್ಕಾರದ ಸಂಸ್ಕೃತಿಗಳಿಗೂ ಕರುಳಬಳ್ಳಿನಂಟು. ಇಲ್ಲಿನ ಹಣ್ಣುಗಳನ್ನು ನೋಡುವಾಗ 'ಬಾಬರ್ ನಾಮಾ'ದ ನೆನಪಾಗುತ್ತದೆ. ಉಜ್ಬೆಕಿಸ್ತಾನದ ಸಮರಖಂಡದಿಂದ ಬಂದ ಬಾಬರ್, ತನ್ನ ಆತ್ಮಕಥೆಯಲ್ಲಿ ತಾಯ್ನಾಡಿನ ಹಣ್ಣಿನ ತೋಟಗಳನ್ನೂ ಚಿಲುಮೆಗಳನ್ನೂ ಹಣ್ಣುಗಳ ರುಚಿಯನ್ನೂ ಮತ್ತೆಮತ್ತೆ ಕನವರಿಸುತ್ತಾನೆ.

ಹಣ್ಣಿಗೆ ಹೋಲಿಸಿದರೆ ಮರುಭೂಮಿ ದೇಶಗಳಲ್ಲಿ ಪುಷ್ಪಕೃಷಿ ಕಡಿಮೆ. ಜನ ತಲೆಗೆ ಹೂ ಮುಡಿಯುವುದಿಲ್ಲ.

ಆದರೆ ಹುತಾತ್ಮರ ಸಂತರ ಸಮಾಧಿಗಳಿಗೆ ಹೂಗುಚ್ಛ ಅರ್ಪಿಸುವ ಸಂಸ್ಕೃತಿ ಇರಾನಿನಲ್ಲಿದೆ. ಮರುಭೂಮಿಯ ಎರಡು ಹೂವುಗಳು ವಾಣಿಜ್ಯ ಮೌಲ್ಯವುಳ್ಳವು. ಒಂದು-ಅತ್ತರನ್ನು ಉತ್ಪಾದಿಸುವ ಗುಲಾಬಿ. ಮತ್ತೊಂದು ಆಹಾರ-ಪಾನೀಯ ತಯಾರಿಕೆಯಲ್ಲಿ ಒದಗುವ ಕೇಸರಿ. ಒಣಗುಲಾಬಿಯ ಪಕಳೆಗಳನ್ನು ಚಹಪುಡಿಯ ಜತೆಗೆ ಬೆರೆಸಿ ಮಾರುವ ಅಂಗಡಿಗಳು ಇಲ್ಲಿ ಸಾಮಾನ್ಯ. ಅರೇಬಿಯಾದ ತಾಯಿಫ್ ನಗರದಲ್ಲಿ ಗುಲಾಬಿ ಉತ್ಸವಕ್ಕೆಂದೇ ನಾವು ಹೋಗಿದ್ದೆವು. ಕೇಸರವು ಹಿಮಾವೃತ ಪ್ರದೇಶದಲ್ಲೇ ಬೆಳೆವ ಬೆಳೆ. ಮಶಾದ್‌ನಲ್ಲಿ ಕೇಸರಿ ಪರಾಗದ ಅಂಗಡಿಗಳು ಚಿನ್ನಬೆಳ್ಳಿ ಅಂಗಡಿಗಳಂತೆ ಝುಗಝುಗಿಸುತ್ತಿದ್ದವು.

ಮರುಭೂಮಿಯ ಈ ಹೂವು-ಹಣ್ಣಿನ ತೋಟಗಳು ಜೇನುತುಪ್ಪ ಉತ್ಪಾದನೆಗೂ ಕಾರಣವಾಗಿವೆ. ಹಣ್ಣಿನಂಗಡಿಗಳಲ್ಲಿ ಜೇನು ತುಂಬಿದ ಸೀಸೆಗಳನ್ನು ನೋಡಬಹುದು. ಹೋಟೆಲುಗಳಲ್ಲಿ ಬೆಳಗಿನ ತಿಂಡಿಗೆ ಬ್ರೆಡ್ ಜತೆ ಸೇವಿಸಲು ಜೇನುತುಪ್ಪ ಕೊಡಲಾಗುತ್ತದೆ. ಬಸ್ತಾಮಿನ ಹೋಟೆಲಿನಲ್ಲಿ ಜೇನುತುಪ್ಪವನ್ನು ದೊಡ್ಡಬಟ್ಟಲಲ್ಲಿ ಪಾಯಸದಂತೆ ಮೇಜಿನಮೇಲೆ ಇಟ್ಟಿದ್ದರು. ಜೆರುಸಲೇಮಿನ ದ್ರಾಕ್ಷಾರಸ ಮತ್ತು ಜೇನು ಉತ್ಕೃಷ್ಟ. ಇಸ್ರೇಲ್-ಪ್ಯಾಲೆಸ್ತೈನ್ ದೇಶದ ಜೇನ್ನೊಣಗಳು ಮಕರಂದ ಹುಡುಕಿ ಲೆಬೆನಾನ್ ಸಿರಿಯಾದ ಬೆಟ್ಟಗಳಲ್ಲಿರುವ ಹೂಗಳಿಗೆ ಯಾನ ಮಾಡುತ್ತವೆಯಂತೆ. ಹಂಚಿಕೊಂಡು ಬದುಕಲಾರದೆ ರಕ್ತಪಾತಕ ಯುದ್ಧಗಳಲ್ಲಿ ತೊಡಗಿರುವ ದೇಶಗಳಿಗೆ ಈ ದುಂಬಿಗಳು ಯಾವ ಸಂದೇಶ ಕೊಡುತ್ತಿವೆ? ದ್ರಾಕ್ಷಾರಸದ ಸೇವನೆ ಕ್ರೈಸ್ತರ ಪವಿತ್ರ ಆಚರಣೆಗಳಲ್ಲಿ ಒಂದು. ಜೆರುಸಲೆಮಿಗೆ ಆಗಮಿಸುವ ಕ್ರೈಸ್ತ ಯಾತ್ರಿಕರು ಬಾಟಲಿಗಟ್ಟಲೆ ಕೊಂಡು ಮನೆಗೆ ಒಯ್ಯುವರು.



ಮರುಭೂಮಿ ದೇಶಗಳ ಹೂವುಹಣ್ಣುಗಳು, ಅಲ್ಲಿನ ಶಿಲ್ಪ ಚಿತ್ರ ರತ್ನಗಂಬಳಿ ಕಲೆಗಳಲ್ಲೂ ಪ್ರತಿಫಲಿಸಿವೆ. ಇರಾನಿನ ರತ್ನಗಂಬಳಿಗಳಲ್ಲಿ ಹೂದೋಟದ ಸನ್ನಿವೇಶಗಳು ಸಾಮಾನ್ಯವಾಗಿ ಚಿತ್ರಿತವಾಗಿವೆ. ಅಲ್ಲಿ ಹಲವು ಬಗೆಯ ಹಕ್ಕಿಗಳು ಫಲಭರಿತ ಮರದಲ್ಲಿ ಕೂತು ತಿನ್ನುವ ದೃಶ್ಯಗಳಿವೆ. ವನವಿಹಾರಕ್ಕೆ ಹೋದ ಕುಟುಂಬವು ಬಗೆಬಗೆಯ ಆಹಾರ ಹಣ್ಣು ಇರಿಸಿಕೊಂಡು ಹೊಳೆಬದಿ ಕೂತಿರುವ ಸನ್ನಿವೇಶವೂ ಇದೆ. ಅವರು ತಿನ್ನುತ್ತಿರುವ ಕಲ್ಲಂಗಡಿ ಹೋಳಿನಲ್ಲಿ ಹಣ್ಣಿನ ಹಸಿರುಸಿಪ್ಪೆ, ಕೆಂದಿರುಳು, ಅದರೊಳಗೆ ಇಣುಕುವ ಕಪ್ಪುಬೀಜ ಎಲ್ಲವೂ ಚಿತ್ರಿತವಾಗಿವೆ. ಕರ್ಬಲಾ ಶಹರದಲ್ಲಿ ಹಜರತ್ ಹುಸೇನರ ದರ್ಗಾದ ಮೇಲೆ ಅಳವಡಿಸಿದ ಚಿನ್ನದ ರಸಲೇಪಿತ ಲೋಹದಾವರಣದ ಮೇಲೆ ದ್ರಾಕ್ಷಿ ಗೊಂಚಲು, ಕಿತ್ತಲೆಯ ಗೊಂಚಲುಗಳನ್ನು ಕೆತ್ತಿರುವುದನ್ನು ಗಮನಿಸಿದೆ. ಇಷ್ಟೊಂದು ಬಗೆಯ ಹಣ್ಣು ಬೆಳೆವ ಮರುಭೂಮಿ ದೇಶಗಳಲ್ಲಿ ಹಣ್ಣಿನ ರಸಕ್ಕಿಂತ ಅಮೆರಿಕದ ತಂಪು ಪಾನೀಯಗಳು ಜನಪ್ರಿಯವಾಗಿರುವುದು ಮಾತ್ರ ಅರ್ಥವಾಗಲಿಲ್ಲ.

ಬಿರುಬಿಸಿಲಿನ ಮರುಭೂಮಿ ನಾಡುಗಳಲ್ಲಿ ನೆಲೆಸಿರುವ ಈ ಫಲಸಮೃದ್ಧಿಯು ಹಿಮಾಲಯದ ಹೂವಿನ ಕಣಿವೆಯನ್ನು ನೆನಪಿಸುತ್ತದೆ. ಅಲ್ಲಿನ ಪ್ರಾಣಘಾತಕವಾದ ರೂಕ್ಷ ಹವಾಮಾನದಲ್ಲಿ ಎಷ್ಟೊಂದು ಕೋಮಲವಾದ ಹೂವು ಅರಳುತ್ತವೆ? ಬಹುಶಃ ಎಲ್ಲ ಹೂವು-ಹಣ್ಣುಗಳು ಬಿಸಿಲಲ್ಲಿ ಸುಡಲು, ಚಳಿಯಲ್ಲಿ ನಡುಗಲು, ಹಿಮಪಾತದಲ್ಲಿ ಸಾಯದೆ ಬದುಕಲು ಸಿದ್ಧವಾಗಿಯೇ ಮೈತಳೆಯುತ್ತವೆ- ಪ್ರಕೃತಿ ವಿಪರೀತವಾಗಿ ವರ್ತಿಸುವ ಪ್ರದೇಶದಲ್ಲಿ ಕೂಡ ಕಸುವಿದ್ದರೆ ಬದುಕಬಹುದು ಎಂದು ಜನರಿಗೆ ಪಾಠ ಹೇಳುವಂತೆ, ಭರವಸೆ ನೀಡುವಂತೆ.



# ವಿದ್ಯಾರ್ಥಿಗಳೊಂದಿಗೆ...- 2

ಗೆಳೆಯರೇ!
ಕಳೆದ ಸಂಚಿಕೆಯಲ್ಲಿ ವಿವರಿಸಿದಂತೆ ನೀವೆಲ್ಲರೂ ನಿಮ್ಮ ನಿಮ್ಮ ಸಾಮರ್ಥ್ಯ/ ಸಮಸ್ಯೆಗಳನ್ನು ಅರಿಯುವ ಪ್ರಾಮಾಣಿಕ ಪ್ರಯತ್ನದಲ್ಲಿ ಯಶಸ್ವಿಯಾಗಿರುತ್ತೀರಿ ಎಂದು ಭಾವಿಸುತ್ತೇನೆ. ಈಗ ಆ ಸಾಮರ್ಥ್ಯವನ್ನು ಹೆಚ್ಚಿಸುವಂತೆ ಮತ್ತು ಸಮಸ್ಯೆಗಳನ್ನು ಕುಗ್ಗಿಸುವಂತೆ ಓದುವ ವಿಧಾನಗಳನ್ನು ತಿಳಿಯಬೇಕಾಗಿದೆ.

ಮೊದಲನೆಯದಾಗಿ ಪರೀಕ್ಷೆಗಳ ಬಗ್ಗೆ ನೀವು ಧನಾತ್ಮಕ ದೃಷ್ಟಿಕೋನ (positive attitude) ಬೆಳೆಸಿಕೊಳ್ಳಬೇಕು. ಅದು ಹೇಗೆ ಎನ್ನುವುದು ತಿಳಿಯೋಣ.

ಮಾರ್ಚ್ ತಿಂಗಳಿನಲ್ಲಿ ನಿಮ್ಮ ಕಾಲೇಜ್/ ಸ್ಕೂಲ್ ಡೇ ಇದೆ ಎಂದು ನಿಮ್ಮ ಆಡಳಿತ ಮಂಡಳಿ ಹೇಳಿದೆ ಎಂದುಕೊಳ್ಳಿ. ಅದರಲ್ಲಿ ಎಲ್ಲರೂ ಭಾಗವಹಿಸಲೇಬೇಕು, ಮತ್ತು ತುಂಬಾ ಜನ ಗೌರವಾನ್ವಿತ ಮತ್ತು ಪ್ರಮುಖ ವ್ಯಕ್ತಿಗಳು ಅತಿಥಿಗಳಾಗಿ ಬರುತ್ತಿರುವುದರಿಂದ ಸಮಾರಂಭ ಅಚ್ಚುಕಟ್ಟಾಗಿ ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದಂತೆ ನಡೆಯಬೇಕೆಂದು ಹೇಳಿದ್ದಾರೆ. ಆಗ ನೀವೆಲ್ಲರೂ ಮಾಡುವುದೇನು? ಎಲ್ಲರೂ ಒಂದೆಡೆ ಕಲೆತು ಚರ್ಚಿಸಿ, ಯಾರ್ಯಾರು ಯಾವ ಯಾವ ಕರ್ತವ್ಯಗಳನ್ನು ಮಾಡಬೇಕು ಯಾವುದಕ್ಕೆ ಎಷ್ಟು ಸಮಯಾವಕಾಶ ನೀಡಬೇಕು ಮತ್ತು ಯಾವುದು ಯಾವಾಗ ಮಾಡಬೇಕು ಎಂದು ನಿರ್ಣಯಿಸುತ್ತೀರಿ. ಅದರಂತೆ ನಿಮ್ಮ ಪಾತ್ರಗಳನ್ನು ನಿಭಾಯಿಸಲು ಉತ್ಸುಕರಾಗಿರುತ್ತೀರಿ. ಎಷ್ಟೋ ಸಲ ಊಟ ತಿಂಡಿಗಳನ್ನು ಮರೆತು ಸಮಯದ ಪರಿವೆಯಿಲ್ಲದೆ ನಿಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತಲ್ಲಿನ ರಾಗಿರುತ್ತೀರಿ. ಆದರೂ ನಿಮಗೆ ಬೇಸರ ಬರುವುದಿಲ್ಲ ಸುಸ್ತಾಗುವುದಿಲ್ಲ. ಯಾಕೆಂದರೆ ಮಾಡುತ್ತಿರುವ ಕೆಲಸದಲ್ಲಿ ನಿಮಗೆ ಆಸಕ್ತಿ ಇದೆ. ಇಂತಿಷ್ಟು ಸಮಯದೊಳಗೆ ಮಾಡಲೇಬೇಕೆಂಬ ನಿಯಮವಿದೆ. ಆ ಕೆಲಸದಿಂದ ನಿಮಗೆ ಸಂತೋಷವಾಗುತ್ತಿದೆ.

ಇದೇ ರೀತಿಯಾಗಿ ಪರೀಕ್ಷೆಯನ್ನು ಸಹ ಒಂದು ಸಮಾರಂಭವೆಂದು ತಿಳಿದು ಅದಕ್ಕಾಗಿ ವ್ಯವಸ್ಥಿತವಾಗಿ ತಯಾರಿ ನಡೆಸಿದಾಗ ಬೇಸರದ ಬದಲು ಸಂತಸವಾಗುತ್ತದೆ. ಸ್ವಲ್ಪಮಟ್ಟಿನ ಸಂತೋಷವನ್ನು ನೀಡುವ ಸಮಾರಂಭಕ್ಕಾಗಿ ಅಷ್ಟು ವ್ಯವಸ್ಥಿತವಾಗಿ ತಯಾರಿ ನಡೆಸುವಾಗ ಜೀವನವನ್ನೇ ಸಂತೋಷಮಯವನ್ನಾಗಿ ಮಾಡಲು ಸಹಾಯ ಮಾಡುವ ಪರೀಕ್ಷೆಗಳಿಗೆ ಇನ್ನಷ್ಟು ಸುವ್ಯವಸ್ಥಿತವಾಗಿ ತಯಾರಿ ನಡೆಸಲೇಬೇಕಲ್ಲವೇ? ಈ ರೀತಿಯಾಗಿ ಪರೀಕ್ಷೆ ಎಂದರೆ ಒಂದು ಗುಮ್ಮವಲ್ಲ, ನಿಮ್ಮ ಜೀವನದ ಸಂತಸವನ್ನು ಹೆಚ್ಚಿಸುವ ಒಂದು ಹಂತ ಎಂದು ತಿಳಿದಾಗ ಅದರ ಬಗ್ಗೆ ಇರುವ ಭಯ ಮಾಯವಾಗಿ ಓದುವುದನ್ನು ಆಸ್ವಾದಿಸುವ ಧನಾತ್ಮಕ ದೃಷ್ಟಿಕೋನ ತನ್ನಿಂದ ತಾನೇ ಬೆಳೆಯುತ್ತದೆ. ಈ ದೃಷ್ಟಿಕೋನದ ಬಗ್ಗೆ ಒಂದು ಪುಟ್ಟ ಕಥೆ ಇದೆ.



ಗಾಯತ್ರಿ ಕುಲಕರ್ಣಿ
ಆಪ್ತ ಸಮಾಲೋಚಕರು, ಹೊಸಪೇಟೆ

Scan For Digital Colourful
HAMPI TIMES E-paper

ಒಂದೂರಿನಲ್ಲಿ ಒಬ್ಬ ರಾಜ. ಆತನಿಗೆ ಒಬ್ಬಳೇ ಮಗಳು. ಚಿಕ್ಕ ವಯಸ್ಸಿನಿಂದಲೂ ಮುದ್ದಾಗಿ ಬೆಳೆಸಿದ ರಾಜ, ಅವಳ ಇಷ್ಟಕ್ಕೆ ವಿರುದ್ಧವಾಗಿ ಎಂದೂ ನಡೆದಿರಲಿಲ್ಲ. ಅವಳು ಏನೇ ಕೇಳಿದರು ಪೂರೈಸುತ್ತಿದ್ದ. ರಾಜಕುಮಾರಿ ತೀರ ಚಿಕ್ಕವಳಿದ್ದಾಗ ಒಂದು ಆಕಳ ಕರುವನ್ನು ಇಷ್ಟಪಟ್ಟು ಅದನ್ನು ತನ್ನೊಂದಿಗೆ ಇರಿಸಿಕೊಂಡಿದ್ದಳು. ರಾಜಕುಮಾರಿ ಬೆಳೆದು ದೊಡ್ಡವಳಾದಳು. ಅವಳೊಂದಿಗೆ ಆ ಕರು ಕೂಡ ಬೆಳೆದು ಗೂಳಿಯಾಯಿತು. ಚಿಕ್ಕಂದಿನಿಂದಲೂ ರಾಜಕುಮಾರಿ ಆಡುತ್ತಿದ್ದ ಆಟವೆಂದರೆ, ಆ ಕರು ಒಂದು ದೊಡ್ಡ ತಟ್ಟೆಯಲ್ಲಿ ಮೈಕುಗ್ಗಿಸಿ ನಿಂತಾಗ ಆಕೆ ಆ ತಟ್ಟೆಯನ್ನು ಎತ್ತಿ ಇಳಿಸುತ್ತಿದ್ದಳು. ಕರು ಗೂಳಿಯಾದಾಗಲೂ ಇದು ಮುಂದುವರೆದಿತ್ತು. ಆದರೆ ಆಕೆಯ ಸ್ವಯಂವರವನ್ನು ಪ್ರಕಟಿಸಿದಾಗ ಆಕೆಯ ಈ ಆಟವೇ ಒಂದು ಸಮಸ್ಯೆಯಾಗಿ ಬಿಟ್ಟಿತ್ತು. ಏಕೆಂದರೆ ಸ್ವಯಂವರಕ್ಕೆ ಬಂದ ರಾಜಕುಮಾರರಿಗೆ ತಟ್ಟೆಯಲ್ಲಿ ನಿಂತಿರುವ ಗೂಳಿಯನ್ನು ಎತ್ತುವ ಕರಾರು ಹಾಕಲಾಗುತ್ತಿತ್ತು. ರಾಜಾಶ್ರಯದಲ್ಲಿ ದಷ್ಟಪುಷ್ಟವಾಗಿ ಬೆಳೆದ ಗೂಳಿಯನ್ನು ಒಂದು ಕೈಯಲ್ಲಿ ಎತ್ತಲಿಕ್ಕೆ ಆಗದೆ ವೀರಾಧಿವೀರರಾದ ರಾಜಕುಮಾರರೆಲ್ಲರೂ ನಿರಾಸೆ ಯಿಂದ ಹಿಂದಿರುಗಬೇಕಾಯಿತು. ಸುಕುಮಾರಿಯಾದ ರಾಜಕುಮಾರಿ ಸುನಾಯಾಸವಾಗಿ ಮಾಡುವ ಕೆಲಸವನ್ನು ತಮ್ಮಿಂದ ಮಾಡಲಾಗುತ್ತಿಲ್ಲವೆಂದು ಅವಮಾನದಿಂದ ತಲೆತಗ್ಗಿಸುವಂತಾಯಿತು. ಒಂದು ದಿನ ಶಕ್ತಿಯೊಂದಿಗೆ ತುಂಬಾ ಯುಕ್ತಿವಂತನೂ ಆದ ರಾಜಕುಮಾರನೊಬ್ಬ ಸ್ವಯಂವರಕ್ಕೆ ಬಂದ. ಹಾಕುವ ಕರಾರಿನ ಬಗ್ಗೆ ಮೊದಲೇ ತಿಳಿದುಕೊಂಡಿದ್ದ. ಯಥಾ ಪ್ರಕಾರ ತಟ್ಟೆಯಲ್ಲಿ ಬಂದು ನಿಂತ ಗೂಳಿಯನ್ನು ಒಂದು ಕೈಯಲ್ಲಿ ಎತ್ತಿ ಇಳಿಸಿದ ರಾಜಕುಮಾರಿ, ಅದೇ ಕೆಲಸ ಮಾಡುವಂತೆ ರಾಜಕುಮಾರನಿಗೆ




ಸೂಚಿಸಿದಳು. ತಾನು ತೋರಿಸುವ ಒಂದು ವಸ್ತುವನ್ನು ರಾಜಕುಮಾರಿ ಎತ್ತುವುದಾದರೆ ಮಾತ್ರ ತಾನು ಆ ಗೂಳಿಯನ್ನು ಎತ್ತುವುದಾಗಿ ಆತ ಹೇಳಿದ. ಅದಕ್ಕೆ ಒಪ್ಪಿದ ರಾಜಕುಮಾರಿಗೆ, ಒಂದು ದೊಡ್ಡ ಕಲ್ಲನ್ನು ತೋರಿಸಿ ಎತ್ತುವಂತೆ ಹೇಳಿದ. ಅಷ್ಟು ಭಾರವಾದ ಮತ್ತು ದೊಡ್ಡದಾದ ಕಲ್ಲನ್ನು ಸುಕುಮಾರಿಯಾದ ತಾನು ಎತ್ತುವುದು ಅಸಾಧ್ಯವೆಂದಳು ರಾಜಕುಮಾರಿ. "ರಾಜಕುಮಾರಿ ಬೇಕಾದರೆ ತೂಗಿಸಿ ನೋಡಿ. ನಿಮ್ಮ ಗೂಳಿ ಎಷ್ಟು ಭಾರವಿದೆಯೋ ಆ ಕಲ್ಲು ಸಹ ಅಷ್ಟೇ ಭಾರವಿದೆ. ಗೂಳಿಯನ್ನು ಒಂದು ಕೈಯಲ್ಲಿ ಎತ್ತುವಿರಾದರೆ ಕಲ್ಲನ್ನೇಕೆ ಎತ್ತುವುದಿಲ್ಲ?" ಎಂದು ಪ್ರಶ್ನಿಸಿದ ರಾಜಕುಮಾರ. ಅದಕ್ಕೆ ಅವಳಲ್ಲಿ ಉತ್ತರವಿರಲಿಲ್ಲ. ಈ ಕಥೆ ಮುಂದೇನಾಯ್ತು ಎನ್ನುವು ದಕ್ಕಿಂತ ಆ ರಾಜಕುಮಾರಿಗೆ ಕಲ್ಲನ್ನೇಕೆ ಎತ್ತಲಾಗಲಿಲ್ಲ ಎನ್ನುವುದು ನಮಗೆ ಮುಖ್ಯವಾಗುತ್ತದೆ.

ರಾಜಕುಮಾರಿ ಗೂಳಿಯನ್ನು ಕರುವಾಗಿದ್ದಾಗಿನಿಂದಲೂ ಎತ್ತುತ್ತಿದ್ದಾಳೆ. ಹಂತ ಹಂತವಾಗಿ ಅದು ಬೆಳೆಯುತ್ತಿರುವುದು ಅವಳ ಗಮನಕ್ಕೆ ಬರಲೇ ಇಲ್ಲ. ನಿತ್ಯ ಮಾಡುತ್ತಿರುವ ಕೆಲಸವಾದ್ದರಿಂದ ಅವಳಿಗೆ ಅದು ಕಷ್ಟವೆನಿಸುತ್ತಿರಲಿಲ್ಲ. ಅದೇ ಕಲ್ಲನ್ನು ನೋಡಿದಾಗ ಅದರ ಭಾರ ಅವಳ ಕಲ್ಪನೆಗೆ ಬಂದು ಅದನ್ನೆತ್ತುವುದು ತನ್ನಿಂದ ಅಸಾಧ್ಯವೆನಿಸಿತು.

ಗೆಳೆಯರೇ! ನಿಮ್ಮ ವಿದ್ಯಾಭ್ಯಾಸವಾದರೂ ಅಷ್ಟೇ. ಚಿಕ್ಕ ತರಗತಿಗಳಲ್ಲಿ ಕರುವಾಗಿದ್ದ ಪಠ್ಯಗಳು ಹಂತ ಹಂತವಾಗಿ ಬೆಳೆದು ಗೂಳಿಯಂತೆ ದೊಡ್ಡದಾಗುತ್ತವೆ. ದಿನನಿತ್ಯ ಅದರ ಒಡನಾಟವಿದ್ದಾಗ ಅದನ್ನು ಓದುವುದು ಕಷ್ಟವೆನಿಸುವುದಿಲ್ಲ. ಗೂಳಿ ಕಲ್ಲಾದಂತೆ, ಪಠ್ಯ ಅಪರಿಚಿತವಾದಾಗ ಅದನ್ನು ಓದುವುದು ತುಂಬಾ ಕಷ್ಟವೆನಿಸಿ ಬಿಡುತ್ತದೆ. ಅದಕ್ಕಾಗಿ ನಿಮ್ಮ ಪಠ್ಯಗಳು ಮತ್ತು ಓದನ್ನು ನಿಮ್ಮೊಡನೆ ಬೆಳೆದು ಬಂದ ಕರುವಿನಂತೆ ತಿಳಿದಾಗ ಮಾತ್ರ ಪರೀಕ್ಷೆ ಬರೆಯುವುದು ಆಟವೆನಿಸುತ್ತದೆ. ಆದರೆ ಸ್ವಯಂವರಕ್ಕೆ ಬಂದ ರಾಜಕುಮಾರರಂತೆ ಅಯ್ಯಪ್ಪ! ಇದು ಗೂಳಿ ನಾನು ಹೇಗೆ ಇದನ್ನೇತ್ತಲಿ ಎಂದು ಕೊಂಡರೆ ಪರೀಕ್ಷೆ ನಿಮ್ಮ ಪಾಲಿಗೆ ಗುಮ್ಮವಾಗುತ್ತದೆ.

ಈಗಿನಿಂದಲೇ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಓದಲು ಪ್ರಾರಂಭಿಸಿದರೆ ಪರೀಕ್ಷೆಯಲ್ಲಿ ಯಶಸ್ಸು ಗಳಿಸುವುದು ತುಂಬಾ ಸುಲಭ. ಅದಕ್ಕೆ ನೀವು ಈ ಕೆಳಕಂಡ ಹಂತಗಳನ್ನು ಅನುಸರಿಸಬಹುದು.

1. ಮೊದಲನೆಯದಾಗಿ ನಿಮ್ಮ ಪುಸ್ತಕದ ಕಪಾಟನ್ನು ಸ್ವಚ್ಛ ಮಾಡಿ. ಈಗೀಗ ಹತ್ತನೇ ತರಗತಿ ಮತ್ತು ಪಿಯುಸಿ ವಿದ್ಯಾರ್ಥಿಗಳು ಪಠ್ಯಪುಸ್ತಕಗಳ ಜೊತೆಗೆ ನೂರೆಂಟು ಬೇರೆ ತರಹದ ಪುಸ್ತಕಗಳನ್ನು ಇಟ್ಟುಕೊಂಡಿರುತ್ತಾರೆ. ಮಾದರಿ ಪ್ರಶ್ನೆ ಪತ್ರಿಕೆಗಳು, ಮ್ಯಾಗ್ಜಿನ್ ಗಳು, ಹಿರಿಯ ವಿದ್ಯಾರ್ಥಿಗಳ ನೋಟ್ಸ್ ಗಳು ಮುಂತಾದವು ಎಲ್ಲ ಇರುತ್ತವೆ. ಇವನ್ನೆಲ್ಲ ವಿಂಗಡಿಸಿ ಆಯಾ ವಿಷಯಗಳಿಗೆ ಸಂಬಂಧಿಸಿದವುಗಳನ್ನು ಬೇರೆ ಬೇರೆ ಇಡಿ. ನಿಮಗೆ ಯಾವುದು ಹೆಚ್ಚು ಉಪಯುಕ್ತವೆನಿಸುತ್ತವೋ ಅವನ್ನು ಬಿಟ್ಟು ಉಳಿದುದೆಲ್ಲವನ್ನು ಬೇರೆ ತೆಗೆದಿಟ್ಟುಬಿಡಿ. ಸ್ವಚ್ಛ ಮಾಡಿದ ಕಪಾಟಿನಲ್ಲಿ ವಿಷಯವಾರು ಪುಸ್ತಕಗಳನ್ನು ಶಿಸ್ತಾಗಿ ಜೋಡಿಸಿಟ್ಟುಕೊಳ್ಳಿ.

2. ಕಪಾಟು ಪುಸ್ತಕಗಳನ್ನು ಸ್ವಚ್ಛ ಮಾಡಿದ್ದಾಯಿತು. ಈಗ ತಲೆಯನ್ನು ಶುಚಿಗೊಳಿಸಬೇಕು. ಅಲ್ಲ ಸಲ್ಲದ ಆಲೋಚನೆಗಳನ್ನೆಲ್ಲಾ ಬದಿಗಿಟ್ಟು, ಒಂದೊಂದಾಗಿ ನಿಮ್ಮ ಪಠ್ಯಪುಸ್ತಕಗಳನ್ನು ತೆಗೆದುಕೊಂಡು, ಒಂದು ಹಾಳೆಯಲ್ಲಿ ಆ ವಿಷಯದಲ್ಲಿ ನಿಮಗಿರುವ ಪಾಠಗಳಾವುವು ಎನ್ನುವುದು ಬರೆಯಿರಿ. ಹಾಗೆ ಮಾಡುವುದರಿಂದ ಆ ಸಬ್ಜೆಕ್ಟ್ ನಲ್ಲಿ ನೀವು ಪರೀಕ್ಷೆಗೆ ಓದಬೇಕಾಗಿರುವುದೇನು ಎನ್ನುವ ಚೌಕಟ್ಟು ನಿರ್ಮಿಸಿದಂತಾಗುತ್ತದೆ. ಹೀಗೆ ಎಲ್ಲಾ ವಿಷಯಗಳ ಬಗ್ಗೆ ಬೇರೆ ಬೇರೆ ಹಾಳೆಗಳಲ್ಲಿ ಬರೆದು ಇಟ್ಟುಕೊಳ್ಳುವುದರಿಂದ ನಿಮ್ಮ ಮುಂದಿರುವ ಕೆಲಸದ ಗಾತ್ರ ಏನು ಎನ್ನುವುದು ಖಚಿತವಾಗಿ ತಿಳಿಯಬಹುದು. ನಾವು ಮಾಡುವ ಕೆಲಸದ ಸಂಪೂರ್ಣ ಅರಿವಿದ್ದಾಗ ಮಾತ್ರ ಅದನ್ನು ಪೂರ್ಣಗೊಳಿಸಲು ನಾವು ಮಾಡಬೇಕಾದ ಪ್ರಯತ್ನಗಳು ಮತ್ತು ಅದಕ್ಕಾಗಿ ನಮಗೆ ಬೇಕಾದ ಸಲಕರಣೆಗಳ ಅರಿವು ಸಹ ಉಂಟಾಗುತ್ತದೆ. ಹೀಗೆ ಮಾನಸಿಕವಾಗಿ ಸಿದ್ಧರಾದಾಗ ಆಸಕ್ತಿ ತನ್ನಿಂದ ತಾನೇ ಬರಲಾರಂಭಿಸುತ್ತದೆ.

3. ಒಂದು ವಿಷಯದ ಬಗ್ಗೆ ಅಭ್ಯಾಸವನ್ನು ಆರಂಭಿಸುವ ಮುನ್ನ ಅದಕ್ಕೆ ಸಂಬಂಧ ಪಟ್ಟ ಪುಸ್ತಕಗಳು, ಟಿಪ್ಪಣಿಗಳನ್ನು ಬರೆಯಲು ಹಾಳೆಗಳು, ಪೆನ್ನು, ಚಿತ್ರಗಳನ್ನು ಬಿಡಿಸುವುದಾದರೆ ಪೆನ್ಸಿಲ್ ರಬ್ಬರ್ ಮುಂತಾದ ಸಲಕರಣೆಗಳನ್ನೆಲ್ಲ ಒಪ್ಪವಾಗಿ ಜೋಡಿಸಿಟ್ಟುಕೊಂಡು ಓದಲು ಸನ್ನದ್ಧರಾಗಿ.

4. ಯಾವುದೇ ಪಾಠವನ್ನು ಓದುವಾಗ ಮೊದಲು ಆ ಪಾಠದಲ್ಲಿ ನಾವು ಏನೇನು ಕಲಿಯಬೇಕಾಗಿದೆ, ಯಾವುದರ ಬಗ್ಗೆ ತಿಳಿಯಬೇಕಾಗಿದೆ ಎನ್ನುವುದು ಒಮ್ಮೆ ಯೋಚಿಸಬೇಕು. ಉದಾಹರಣೆ ಬೆಳಕು: ಇದರ ಬಗ್ಗೆ ಸಣ್ಣ ತರಗತಿಗಳಿಂದಲೂ ಕಲಿಯುತ್ತಲೇ ಇರುತ್ತೀರಿ. ಒಂದು ತರಗತಿಯಲ್ಲಿ ಕಾಂತಿ ಎಂದರೇನು? ಕಾಂತಿಯ ಮೂಲಗಳು ಯಾವುದು ಎಂದು ತಿಳಿದರೆ ಮತ್ತೊಂದು ತರಗತಿಯಲ್ಲಿ ಕಾಂತಿಯ ವಿವಿಧ ಭೌತಿಕ ಧರ್ಮಗಳು (Reflection, Refraction) ಇದರ ಬಗ್ಗೆ ತಿಳಿಯುತ್ತೀರಿ. ಮತ್ತೊಂದು ಹಂತದಲ್ಲಿ ಮಸೂರಗಳ ಬಗ್ಗೆ, ಕಾಂತಿ ವಿವಿಧ ರೀತಿಯ ಮಸೂರಗಳಲ್ಲಿ ಹಾದು ಹೋದಾಗ ಆಗುವ ಪರಿಣಾಮಗಳ ಬಗ್ಗೆ ತಿಳಿಯುತ್ತೀರಿ. ಹೀಗೆ ಈ ಸದ್ಯ ನೀವು ಓದಬೇಕಾದ ಪಾಠದಲ್ಲಿ ಯಾವ್ಯಾವ ವಿಷಯಗಳು ಒಳಗೊಂಡಿವೆ ಎಂದು ನಿಖರವಾಗಿ ತಿಳಿದುಕೊಂಡು, ಒಂದು ಕಡೆ ಬರೆದಿಟ್ಟುಕೊಂಡರೆ, ನೀವು ಹಂತ ಹಂತವಾಗಿ ಒಂದೊಂದನ್ನೇ ಓದುತ್ತಾ ಹೋದ ಹಾಗೆಲ್ಲ ಆ ಪಾಠವನ್ನು ನೀವು ಎಷ್ಟು ಓದಿರುವಿರಿ ಎನ್ನುವುದು ಖಚಿತವಾಗಿ ತಿಳಿಯುತ್ತದೆ.

ಹೇಗೆ ಓದಬೇಕೆನ್ನುವುದರ ಬಗ್ಗೆ ತಿಳಿದಾಯಿತು. ಇನ್ನು ಯಾವಾಗ ಓದಬೇಕು ಎನ್ನುವ ಪ್ರಶ್ನೆ. ಬಹಳಷ್ಟು ವಿದ್ಯಾರ್ಥಿಗಳು ರಾತ್ರಿ ಓದಿದರೆ ಚೆನ್ನಾಗಿ ಓದಬಹುದು ಎಂಬ ಭ್ರಮೆಯಲ್ಲಿ ಇರುತ್ತಾರೆ. ಅದಕ್ಕಾಗಿ ಟೀ, ಕಾಫಿ ಮೊದಲಾದವು ಕುಡಿದು ನಿದ್ದೆಯನ್ನು ತಡೆಯಲು ಯತ್ನಿಸುತ್ತಾರೆ. ಇದು ಸರಿಯಲ್ಲ. ನಮ್ಮ ಜೈವಿಕ ಗಡಿಯಾರ ರಾತ್ರಿ ವೇಳೆ ವಿಶ್ರಾಂತಿ ಪಡೆಯಲು ನಿರ್ದೇಶಿಸುತ್ತದೆ. ಓದಿದ್ದು ನೆನಪಿನಲ್ಲಿಡಲು ಈ ವಿಶ್ರಾಂತಿ ಸಹಾಯವಾಗುತ್ತದೆ. ಏಕಾಗ್ರತೆಯಿಂದ ಕೆಲಸ ಮಾಡಲು ಸಹ ಈ ವಿಶ್ರಾಂತಿ ಅತ್ಯಗತ್ಯ. ಮನೆಯಲ್ಲಿ ಏನಾದರೂ ಕಾರ್ಯಕ್ರಮಗಳಾದಾಗ, ನೆಂಟರು ಬಂದಾಗ ಕಿತ್ತಾಡಿದ ವಸ್ತುಗಳನ್ನೆಲ್ಲ ಎಲ್ಲರೂ ಹೋದ ನಂತರ ನಾವು ತೆಗೆದಿರಿಸಿಕೊಳ್ಳುತ್ತೇವೆ. ಹಾಗೆಯೇ ಇಡೀ ಹಗಲಿನಲ್ಲಿ ಮೆದುಳಿಗೆ ನಾವು ಹಾಕಿದ, ಮೆದುಳಿನಿಂದ ಹೊರ ತೆಗೆದ ಮತ್ತು ಕಿತ್ತಾಡಿದ ನೆನಪುಗಳೆಲ್ಲವನ್ನು ರಾತ್ರಿಯ ವಿಶ್ರಾಂತಿ ಸಮಯದಲ್ಲಿ ಮೆದುಳು ಶಿಸ್ತಾಗಿ ಜೋಡಿಸಿಡುತ್ತದೆ. ಆದ್ದರಿಂದ ರಾತ್ರಿಯ ನಿದ್ದೆ ಅತ್ಯಗತ್ಯ. ಮುಂದಿನ ಸಂಚಿಕೆಯಲ್ಲಿ ಏಕಾಗ್ರತೆ ಸಾಧಿಸುವುದು ಹೇಗೆ ಎಂದು ತಿಳಿಯುವ ಮುನ್ನ, ನೀವೆಲ್ಲರೂ ನಿಮ್ಮ ಪುಸ್ತಕಗಳು ಮತ್ತು ನಿಮ್ಮ ಮಸ್ತಕಗಳನ್ನು ಸ್ವಚ್ಛಗೊಳಿಸಿ ಓದಲು ಪ್ರಾರಂಭಿಸುತ್ತೀರೆಂದು ಆಶಿಸೋಣ.

## ಕವಿ ಮನಸು

### ಗಾಂಧಿ

ನೀ ನಡೆಯುವಾಗ ದೂಳು ಮೆತ್ತುವ
ಕಾಲುದಾರಿಗಳು ಈಗ ಡಾಂಬರು
ಹೊದಿಕೆಹೊತ್ತ
ಟೈರುದಾರಿಗಳಾಗಿ ಬೂಟಿನ ಸದ್ದಿಗೆ
ಹೈ ಹೀಲ್ಡ್ ಚಪ್ಪಲಿಗೆ ಟಕ್ ಟಕ್ ಧನಿಯಾಗಿ
ಅಪ್ಪಚ್ಚಿಯಾದ ಹೆಣದ ರಕ್ತ ಹೀರುತ್ತಿವೆ!

ಈ ರಸ್ತೆಯ ಮಧ್ಯೆ ನಿರಂತರವಾಗಿ ನಿಂತ ನಿನ್ನ
ಕಾಲುಗಳು ಸೋತಿರಬೇಕು..
ನೀ ಕೂತು ವಿರಮಿಸಲು ಕುರ್ಚಿ
ಹಾಕುವ ಕರುಣೆ ಇಲ್ಲಾರಿಗೂ ಇಲ್ಲ..
ಈ ದಾರಿಯ ಹೊಗೆ ಧೂಳು ಹೀರಿ ನಿನ್ನ
ಆರೋಗ್ಯ ಕೆಟ್ಟಿರಬೇಕು..
ನಿನ್ನ ಪ್ರತಿಮೆಗಳ ಆಸ್ಪತ್ರೆಗೆ ಸೇರಿಸಿ
ಚಿಕಿತ್ಸೆ ಕೊಡಿಸುವವರೂ ಇಲ್ಲ..

ಆದರೂ ನೀ ರಸ್ತೆಯ ಮಧ್ಯೆ ಟ್ರಾಫಿಕ್
ಪೋಲಿಸ್ ಆಗಿ ಕಾರ್ಯನಿರತ!

ಮೋಸ ಭ್ರಷ್ಟಾಚಾರ ಹಿಂಸೆಗೆ ಭಾಷ್ಯ ಬರೆಯುವ
ನಿನ್ನ ಮುಖ ಮುದ್ರೆಯ ನೋಟುಗಳು..
ಕಚೇರಿಯೊಳಗಿನ ಕರ್ಮಕಾಂಡವ ಕಣ್ಣಾರೆ ಕಂಡು
ಕಣ್ಣೀರಿಡುವ ನಿನ್ನ ಫೋಟೋಗಳು
ನೀನು ನೋಡಬಾರದ್ದನ್ನು ನಿನ್ನ ಕಣ್ಣೆದುರು
ಚುಚ್ಚಿ ಚುಚ್ಚಿ..ತೋರಿಸಿ
ಗಹಗಹಿಸಿ ನಗುವ ನಾವುಗಳು
ಗೋಡ್ಸೆಯ ಗೂಡೊಳಗೆ ಕಾವು ಪಡೆಯುವ
ಮೊಟ್ಟೆಗಳು!

ನಿನ್ನ ಸತ್ಯಾಗ್ರಹದ ಬುನಾದಿಯ ಮೇಲೆ ಅಸತ್ಯದ
ಬಣ್ಣದ ಮನೆಗಳು ರಾರಾಜಿಸುತ್ತಿವೆ
ಅಹಿಂಸೆಯ ಹಾಲಿನ ಬಟ್ಟಲೊಳಗೆ
ರಕ್ತ ಹೆಪ್ಪುಗಟ್ಟುತ್ತಿದೆ..
ಇಂಡಿಯಾದ ಇಂದ್ರಿಯಗಳು
ನಿಗ್ರಹ ಕಳೆದುಕೊಂಡಿವೆ
ಪಠ್ಯಪುಸ್ತಕದೊಳಗೆ ಗಾಂಧಿ ತಾತನಾಗಿ
ಮಕ್ಕಳೊಂದಿಗೆ ಆಟವಾಡುತ್ತಲೇ ಇರು,
ಇತ್ತ ತಲೆ ಹಾಕಲೇಬೇಡ

ಮುದ್ರೆಯೊಳಗೆ ನಿದ್ರಿಸುವ ಗಾಂಧಿಯ
ಎಲ್ಲೆಂದರಲ್ಲಿ ಗುದ್ದಿ ಗುದ್ದಿ ಎಬ್ಬಿಸಿ ಬಿಡುತ್ತಾರೆ,
ಗಲಿಬಿಲಿಗೊಂಡ ತಾತ
ತನ್ನ ಚಾಳೀಸು ಮುಟ್ಟಿನೋಡಿ
ಹೊಡೆದಿಲ್ಲ ಎಂದು ನಿಟ್ಟುಸಿರು ಬಿಟ್ಟು
ಮತ್ತೆ ಮುದ್ರೆಯೊಳಗೆ ನಿದ್ರೆಗೆ ಜಾರುತ್ತಾನೆ!

– ಅಜೋ

## ಎಸ್ ಎಸ್ ಎಲ್ ಸಿ ಪ್ರಶ್ನೋತ್ತರಗಳ ಸರಣಿಗೆ ವಿದ್ಯಾರ್ಥಿಗಳ ಅನಿಸಿಕೆಗಳು

### ಅರ್ಧವಾರ್ಷಿಕ ಪರೀಕ್ಷೆಗೆ ಸಹಾಯಕವಾಯಿತು



ನಾನು **'ಹಂಪಿ ಟೈಮ್ಸ್'** ನಲ್ಲಿ ಬರುವ ಪ್ರಶ್ನೋತ್ತರಗಳನ್ನು ಓದಿ ಅಭ್ಯಾಸ ಮಾಡುತ್ತಿದ್ದೇನೆ. ಇದರಿಂದ ಉತ್ತಮ ಫಲಿತಾಂಶ ಮಾಡಬಹುದು ಎಂಬ ಆತ್ಮವಿಶ್ವಾಸ ಬಂದಿದೆ. ಇಲ್ಲಿನ ಪ್ರಶ್ನೋತ್ತರಗಳು ಅರ್ಧವಾರ್ಷಿಕ ಪರೀಕ್ಷೆಗೆ ತುಂಬಾ ಸಹಾಯಕವಾದವು. ಮಾಹಿತಿ ತಿಳಿಸುತ್ತಿರುವ ಶಿಕ್ಷಕರಿಗೆ ಹಾಗೂ ಪತ್ರಿಕೆಗೆ ನಾನು ಅಭಾರಿಯಾಗಿದ್ದೇನೆ.

**– ಯು.ಸಾಗರ, 10ನೇ ತರಗತಿ.**
ಸರ್ಕಾರಿ ಪ್ರೌಢಶಾಲೆ ಬಸರಕೋಡು. ಹ.ಬೊ.ಹಳ್ಳಿ(ತಾ)

**ವಿದ್ಯಾರ್ಥಿಗಳು, ಪಾಲಕರು, ಶಿಕ್ಷಕರು ನಿಮ್ಮ ಅಭಿಪ್ರಾಯಗಳನ್ನು ಭಾವಚಿತ್ರದೊಂದಿಗೆ ಕಳುಹಿಸಬಹುದು.**
M: 9448633038 - Email: hampitimes@gmail.com

## ಗಾಂಧೀಜಿ, ಶಾಸ್ತ್ರೀಜಿ ಸ್ಮರಣೆ

### ವಿಶ್ರೀಕೃವಿವಿಯಲ್ಲಿ ಮಾದರಿ ಕಾರ್ಯಕ್ರಮ 23 ಕ್ಷೇತ್ರಗಳ ಸೇವಾನಿರತ ನೌಕರರಿಗೆ ಸನ್ಮಾನ



■ **ಹಂಪಿ ಟೈಮ್ಸ್ ಬಳ್ಳಾರಿ**

ಸುಮಾರು 7 ಸಾವಿರ ಅನಾಥ ಶವಗಳ ಸಂಸ್ಕಾರ ಮಾಡಿದ ಶವಾಗಾರ ನಿರ್ವಾಹಕ ಅಂದ್ರಯ್ಯ, ಅಂಗನವಾಡಿ ಕಾರ್ಯಕರ್ತೆ ಮಹಾಲಕ್ಷ್ಮಿ, ಆರೋಗ್ಯ ಇಲಾಖೆಯ ಡಿ.ಸುನಿತಾ, ತ್ಯಾಜ್ಯ ನಿರ್ವಹಣೆ ಮಾಡುವ ಶ್ರೀನಿವಾಸುಲು, ಕೆಎಸ್ಆರ್‌ಟಿಸಿ ಬಸ್ ಚಾಲಕ ಮತ್ತು ನಿರ್ವಾಹಕರು ಹೀಗೆ ಸುಮಾರು 23 ವಿವಿಧ ಕ್ಷೇತ್ರಗಳಲ್ಲಿ ಅವಿರತ ಸೇವೆ ಸಲ್ಲಿಸುತ್ತಿರುವ ಸಮಾಜದ ಕೆಳಹಂತದ ಸೇವಾ ಕಾರ್ಯಕರ್ತರನ್ನು ಗುರುತಿಸಿ ಸನ್ಮಾನಿಸಿ, ಗೌರವಿಸಿದ ಅರ್ಥಪೂರ್ಣ ಕಾರ್ಯಕ್ರಮವನ್ನು ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮ ದಿನಾಚರಣೆ ಅಂಗವಾಗಿ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿತ್ತು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಎನ್‌ಎಸ್‌ಎಸ್ ಕೋಶದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಶ್ರಮದಾನ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸೇವಾ ಕೊಡುಗೆ ನೀಡುತ್ತಿರುವ ಸಿಬ್ಬಂದಿಗೆ ಸನ್ಮಾನ ಕಾರ್ಯಕ್ರಮವನ್ನು ವಿವಿಯ ಕುಲಪತಿಗಳಾದ ಪ್ರೊ.ಎಂ.ಮುನಿರಾಜು ಅವರು ಉದ್ಘಾಟಿಸಿದರು.

ನಂತರ ಮಾತನಾಡಿದ ಕುಲಪತಿಗಳು, ಸಮುದಾಯ ಸೇವೆಯಲ್ಲಿ ತೊಡಗಿರುವ ವಿಶ್ವವಿದ್ಯಾಲಯೇತರ ವ್ಯಕ್ತಿಗಳನ್ನು ಇದೇ ಮೊದಲ ಬಾರಿಗೆ ವಿಶ್ವವಿದ್ಯಾಲಯವು ಗುರುತಿಸಿ ಗೌರವಿಸುತ್ತಿದೆ. ಗಾಂಧೀಜಿಯವರ ಆಶಯದಂತೆ ಸೌಲಭ್ಯ ವಂಚಿತ ವರ್ಗದ ಸಿಬ್ಬಂದಿಯನ್ನು ಗೌರವಿಸುವ ಪರಿಪಾಠಕ್ಕೆ ವಿವಿಯು ನಾಂದಿ ಹಾಡಿದೆ. ತಮ್ಮ ಸೇವೆಯಲ್ಲಿ ಬದ್ಧತೆ ಪ್ರದರ್ಶಿಸುವ ವಿವಿಧ ಸೇವಾ ವಲಯದ ನೌಕರರಿಗೆ ವಿವಿ ವತಿಯಿಂದ ಮುಂಬರುವ ದಿನಗಳಲ್ಲಿ ನಗದು ಬಹುಮಾನ ನೀಡುವುದಾಗಿ ಎಂದು ಅವರು ಘೋಷಿಸಿದರು.

ಕುಲಸಚಿವರಾದ ರುದ್ರೇಶ್ ಎಸ್ ಎನ್ ಮಾತನಾಡಿ, ಸಮಾಜದ

>>4

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

SSLC: ಇಂಗ್ಲಿಷ್

### Unit-1 : A Hero and Grandma climbs a Tree


**Check your Learning Progress:**
**(Write the answers in your note book and practice)**

**Most Important 2 marks questions :**

1. Swami's father drew his attention to a report in the newspaper. What was the report about?
2. Why did swami's father want him to sleep alone in the office room? (2016 June /2017 April)
3. How did swami react when his father challenged him to sleep alone in the office room? (2017 June, 2022 March)
4. Why did Swami conclude that his father's proposition was frightful?
5. Why do you think Swami looked at his granny and his mother while following his father to the room?
6. As silence deepened in the room, what did Swami remember?
7. What made swami's father, his cook and his servant rush up to the office room? (2015 June)
8. Though Swami was not courageous, he became a hero overnight. How?
9. Why were congratulations showered on Swami?
10. Do you think Swami really wanted to join the police? If not, what did he want to be?

**Most important 3 marks questions :**

1. Narrate swami's dreadful experience when he was lying under the bench?
2. Narrate how Swami became a hero overnight? (April 2016)
3. How was Swami successful in fulfilling the intention of his father to prove his courage? (March 2019)
4. Write in your own words how Swami became a hero overnight.(June 2019)
5. In the poem 'Grandma climbs a Tree' the speaker says that his grandma is not childish else is she then? why is she considered to be so.(June 2015)
6. Summarize in your own words the substance of the poem 'Grandma climbs a Tree' (2016 April to September 2020 all years same question repeated)
7. How do you say that the poet's grandmother was genius ?(March 2023)



Prepared by : **R.B.Gurubasavaraj**. Asst Teacher. GHS Basarakodu, HB.Halli Taluk

ಶ್ರೀಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಶ್ವೀಜ । ಸಂವತ್ಸರ: ಕ್ರೋಧಿ

**03–10–2024 – ಗುರುವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಶುಕ್ಲ |
| ನಕ್ಷತ್ರ | : ಹಸ್ತ |
| ಯೋಗ | : ಇಂದ್ರ |
| ಕರಣ | : ಕಿಂಸ್ತುಘ್ನ |
| ಸೂರ್ಯೋದಯ | : 06:20:24 |
| ಸೂರ್ಯಾಸ್ತ | : 18:110:53 |
| ರಾಹು ಕಾಲ | : 13:44–15:13 |
| ಯಮಘಂಡ ಕಾಲ | : 06:20–07:49 |
| ಗುಳಿಕ ಕಾಲ | : 09:18–10:47 |

## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 02–10–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.91 ಅಡಿ |
| ಒಳ ಹರಿವು | 8726 ಕ್ಯುಸೆಕ್ |
| ಹೊರ ಹರಿವು | 10175 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 101.421 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1617.64 ಅಡಿ |
| ಒಳ ಹರಿವು | 1077 ಕ್ಯುಸೆಕ್ |
| ಹೊರ ಹರಿವು | 9715 ಕ್ಯುಸೆಕ್ |
| ಸಾಮರ್ಥ್ಯ | 54.964 ಟಿಎಂಸಿ |

# ಹಂಪಿಯಲ್ಲಿ ಶಕ್ತಿ ದೇವತೆಗಳ ಆರಾಧನೆ

ನವರಾತ್ರಿ ನಾಡಿನೆಲ್ಲಡೆ ಶಕ್ತಿ ದೇವತೆಗಳ ಆರಾಧನೆಯ ಆಚರಣೆ, ಉತ್ಸವಗಳ ಸಡಗರ, ಸಂಭ್ರಮ. ಇದು ದಸರಾ ಹಬ್ಬವೆಂದು ಗ್ರಾಮೀಣ ಪ್ರದೇಶಗಳಲ್ಲಿ ಕರೆಯಲಾಗುತ್ತಿದೆ. ಈ ದಸರಾಚರಣೆ ಕೇವಲ ಮೈಸೂರಿನ ಚಾಮುಂಡಿ ದೇವಿಯ ಬೆಟ್ಟಕ್ಕೆ ಹಾಗೂ ಮೈಸೂರಿನ ಅರಮನೆಗೆ ಸೀಮಿತವಾದದ್ದಲ್ಲ. ನಮ್ಮ ನಾಡಿನ ಪ್ರತಿ ಹಳ್ಳಿ ಹಳ್ಳಿಗಳಲ್ಲಿ, ನಗರಗಳಲ್ಲಿ ಯಾವುದೇ ಬೇದಭಾವಗಳಿಲ್ಲದೆ ಶ್ರದ್ದೆ, ಭಕ್ತಿ ಭಾವಗಳಿಂದ ಆಚರಿಸುವ ಏಕೈಕ ಆಚರಣೆ ಅದು ದಸರಾ ಹಬ್ಬ.

ಇದಕ್ಕಾಗಿಯೇ ಇದನ್ನು, "ನಾಡಹಬ್ಬ" ವೆಂದು ಆಚರಿಸಲಾಗುತ್ತಿದೆ. 9 ದಿನಗಳ ಕಾಲ ನಿತ್ಯವೂ ದೇವಿಗೆ ಅಲಂಕಾರ ಪೂಜೆ ಪ್ರತಿ ದೇವತೆಗಳ ದೇವಾಲಯಗಳಲ್ಲಿ ನಡೆಯುತ್ತವೆ. ಪ್ರತಿ ಊರಿನ ಹಳ್ಳಿಯ, ನಗರಗಳ ದೇವತೆಗಳ ದೇವಾಲಯಗಳು ವಿದ್ಯುತ್ ಅಲಂಕಾರ, ಬಾಳೆ ಮಾವು ಕಬ್ಬುಗಳಿಂದ ಅಲಂಕೃತಗೊಂಡಿರುತ್ತವೆ. ಪ್ರತಿ ದೇವಸ್ಥಾನದಲ್ಲಿ ದೀಪಗಳನ್ನು ಹಾಕಿ ಅವು ಆರದ ಹಾಗೆ ಕಾಯುತ್ತಾರೆ. ಇನ್ನು ಕೆಲವು ಊರುಗಳಲ್ಲಿ ವಿಶೇಷವಾದ ದೇವಿಯನ್ನು ಪ್ರತಿಷ್ಠಾಪಿಸಿ 9 ದಿನಗಳ ಕಾಲ ದೇವಿಯ ಪುರಾಣ ಪ್ರವಚನಗಳನ್ನು ಹಮ್ಮಿಕೊಂಡು ಜನರಿಗೆ ದೇವಿಯ ಬಗ್ಗೆ ಜಾಗೃತಿ ಉಂಟು ಮಾಡುತ್ತಾರೆ. 9 ದಿನಗಳ ಕಾಲ ಪ್ರತಿದಿನವೂ ಒಂದೊಂದು ದೇವಿಯ ಅವತಾರದ ಕುರಿತು ಪೂಜೆ ಪುನಸ್ಕಾರಗಳು ನಡೆಯುತ್ತವೆ.

ಅಕ್ಟೋಬರ್ 2 ಅಮಾವಾಸ್ಯೆಯ ನಂತರ ಅಂದರೆ ಅಕ್ಟೋಬರ್ 3 ರಿಂದ 11 ರವರೆಗೆ ನವಮಿ, ಹತ್ತನೆ ದಿನ ದಶಮಿ ಅಂದರೆ ಅ.12 ವಿಜಯದಶಮಿ. ಈ ಒಂಬತ್ತು ದಿನಗಳಲ್ಲಿ ದೇವಿಯನ್ನು ವಿವಿಧ ಅವತಾರಗಳಲ್ಲಿ ಪೂಜಿಸಲಾಗುತ್ತದೆ. ಅಕ್ಟೋಬರ್ 3 ಮೊದಲ ದಿನ ಶೈಲ ಪುತ್ರಿ ಪೂಜೆ. ಅ 4 ಎರಡನೆಯ ದಿನ ಬ್ರಹ್ಮಚಾರಿ ಪೂಜೆ. ಅ 5 ಮೂರನೆ ದಿನ ಚಂದ್ರಘಂಟಾ ಪೂಜೆ. ಅ 6 ನಾಲ್ಕನೆಯ ದಿನ ಕೂಷ್ಮಾಂಡಿ ಪೂಜೆ. ಅ 7 ಐದನೆ ದಿನ ಸ್ಕಂದ ಮಾತೆ ಪೂಜೆ. ಅ. 8 ಆರನೆ ದಿನ ಕಾತ್ಯಾಯಿನಿ ಪೂಜೆ. ಅ 9 ಏಳನೆ ದಿನದ ಸರಸ್ವತಿ ಪೂಜೆ, (ಕಾಳ ರಾತ್ರಿ ಪೂಜೆ) ಅ. 10 ಎಂಟನೆ ದಿನ ದುರ್ಗಾಷ್ಟಮಿ ಪೂಜೆ. (ಮಹಾಗೌರಿ) ಅ11 ಒಂಬತ್ತನೆ ದಿನ ನವಮಿ ಪೂಜೆ. ಅ 12 ಹತ್ತನೆಯ ದಿನ ವಿಜಯದಶಮಿ. ಹೀಗೆ ನವರಾತ್ರಿ ಈ ಪೂಜೆಗಳು ಒಂಬತ್ತು ದಿನಗಳ ಕಾಲ ನಡೆದು 10ನೇ ದಿನ ವಿಜಯದ ಸಂಕೇತವಾಗಿ ವಿಜಯದಶಮಿಯ ಆಚರಣೆ ನಡೆಯುತ್ತದೆ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489

Scan For Digital Colourful
HAMPI TIMES E-paper

ಈ ನವರಾತ್ರಿ ಉತ್ಸವನ್ನು ಬಳ್ಳಾರಿ ವಿಜಯನಗರ ಜಿಲ್ಲೆಗಳಲ್ಲಿ ಅತ್ಯಂತ ವಿಜೃಂಭಣೆಯಿಂದ ಪಾರಂಪರಿಕವಾಗಿ ಆಚರಿಸಿಕೊಂಡು ಬರಲಾಗುತ್ತಿದೆ.



ವಿಶೇಷವಾಗಿ ಹಂಪಿಯ ನೆಲದಲ್ಲಿ ಶಕ್ತಿ ದೇವತೆಗಳ ಆರಾಧನೆ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಹಂಪಿ ವಿರೂಪಾಕ್ಷ ಈ ನೆಲದ ದೈವವಾಗಿದ್ದರು, ವಿರೂಪಾಕ್ಷನಿಗಿಂತ ಪೂರ್ವದಲ್ಲೇ ಇದು ಪಂಪಾಂಬಿಕೆಯ ನೆಲವಾಗಿತ್ತು. ಅಂದರೆ ಶಕ್ತಿ ದೇವತೆ ಆರಾಧನೆಯ ನೆಲವಾಗಿತ್ತು. ಈ ನೆಲದಲ್ಲಿ ಹಲವಾರು ಶಕ್ತಿ ದೇವತೆಗಳ ಆರಾಧನೆಯು ನಡೆಯುತ್ತಾ ಬಂದಿದೆ. ಪಂಪಾಂಬಿಕೆ ಅಥವಾ ಪಾರ್ವತಿ, ಪಟ್ಟಣದ ಎಲ್ಲಮ್ಮ, ಹತ್ತು ಕೈಯಮ್ಮ, ಮಾತಂಗಿ, ಭುವನೇಶ್ವರಿ, ದುರ್ಗಾದೇವಿ, ಮೊದಲಾದ ದೇವತೆಗಳ ಆರಾಧನೆ ಶತಮಾನಗಳಿಂದ ನಡೆದುಕೊಂಡು ಬಂದಿದೆ, ಕಮಲಾಪುರ, ಹೊಸಪೇಟೆ ಹೊಸೂರು, ಧರ್ಮದ ಗುಡ್ಡ, ಗಾಳೆಮ್ಮ ಹುಲಿಗೆಮ್ಮ, ಹೀಗೆ ಪ್ರತಿಯೊಂದು ಗ್ರಾಮಗಳಲ್ಲಿಯೂ ಶಕ್ತಿ ದೇವತೆಗಳ ಆರಾಧನೆ ನಡೆಯುವದಷ್ಟೇ ಅಲ್ಲ ಕಮಲಾಪುರ ಹೊಸಪೇಟೆಯ ಪ್ರತಿಯೊಂದು ಓಣಿ, ಕೇರಿಗೂ ಒಂದೊಂದು ಶಕ್ತಿ ದೈವಗಳಿದ್ದು ಅವುಗಳ ಆಚರಣೆ ಅತ್ಯಂತ ಭಕ್ತಿ, ಶ್ರದ್ಧೆ, ಸಡಗರದಿಂದ ನಡೆಯುತ್ತಾ ಬಂದಿದೆ. ಆನೆಗುಂದಿ ಬೆಟ್ಟದಲ್ಲಿರುವ ದುರ್ಗಾದೇವಿಯ ನವರಾತ್ರಿ ಉತ್ಸವ ಆಚರಣೆ ಇಂದಿಗೂ ಆಚರಿಸಲಾಗುತ್ತದೆ. ಹಂಪಿಯ ಪ್ರದೇಶದಲ್ಲಿ ಹತ್ತಾರು ಶಕ್ತಿ ದೇವತೆಗಳು ನೆಲೆಗೊಂಡಿದ್ದು ಅವುಗಳ ಆರಾಧನೆ ನವರಾತ್ರಿಯ ಸಂದರ್ಭದಲ್ಲಿ ವಿಶೇಷವಾದ ಪೂಜೆ ಆರಾಧನೆಗಳು ನಡೆಯುತ್ತೆವೆ. ನವರಾತ್ರಿಯ ಈ ಸಂದರ್ಭದಲ್ಲಿ ಹಂಪಿ ಪ್ರದೇಶದ ಶಕ್ತಿ ದೇವತೆಗಳ ಕುರಿತು ವಿಶೇಷ ಲೇಖನಗಳ ಮಾಲೆಯನ್ನು ಪತ್ರಿಕೆಯ ಓದುಗರಿಗಾಗಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯಲ್ಲಿ ದಸರಾದ ಮೊದಲ ದಿನ ಪಾರ್ವತಿ ಅಥವಾ ಪಂಪಾಂಬಿಕೆಯ ಆರಾಧನೆ ಕುರಿತ ಒಂದಿಷ್ಟು ಮಾಹಿತಿ ಇಲ್ಲಿದೆ.

## ಪಂಪಾಂಬಿಕೆ ಅಥವಾ ಪಾರ್ವತಿ ದೇವಿ

ಹಂಪಿಯು ಶೈವ ಪರಂಪರೆಯ ನೆಲ. ಶ್ರೀವಿರೂಪಾಕ್ಷ ಈ ನೆಲದ ಆರಾಧ್ಯ ದೈವ. ಪಾರ್ವತಿಯ ತಪಸ್ಸಿಗೆ ಶಿವ ಇಲ್ಲಿ ಪ್ರತ್ಯಕ್ಷನಾಗಿ ಪಾರ್ವತಿಯನ್ನು ಮದುವೆಯಾಗಿ ನೆಲ ನಿಂತ ಮೇಲೆ ಇದು ವಿರೂಪಾಕ್ಷ ನೆಲವಾಯಿತು. ಆದರೆ ಇದಕ್ಕೂ ಪೂರ್ವದಲ್ಲಿ ಇದು ಪಂಪಾಂಬಿಕೆಯ ಶಕ್ತಿ ಆರಾಧನೆ ನೆಲವಾಗಿತ್ತು. ಹಂಪಿಗೆ ಪಾವಿತ್ರ್ಯತೆ ಬರಲು ಪಾರ್ವತಿಯ ಪೌರಾಣಿಕ ಹಿನ್ನೆಲೆ ಕಾರಣ. ಹಂಪಿ ಪ್ರದೇಶದ ಪಂಪ ಸರೋವರದಲ್ಲಿ ತಾಯಿ ಪಂಪಾ ದೇವಿ ನೆಲೆಸಿದ್ದಳು. ಬ್ರಹ್ಮನ ಮಗಳಾದ ಪಂಪಾದೇವಿಯ ಆರಾಧನೆ ನಡೆದುಕೊಂಡು ಬಂದಿತ್ತು ಇಲ್ಲಿ ಹರಿಯುತ್ತಿರುವ ನದಿಯನ್ನು ಜಾಹ್ನವಿ ನದಿ ಎಂದು ಸಪ್ತಋಷಿಗಳು ಕರೆದಿದ್ದಾರೆ. ಹೀಗೆ ಶಕ್ತಿ ಆರಾಧನೆಯು ನಡೆದುಕೊಂಡು ಬಂದಿದೆ ನಮ್ಮ ಪರಂಪರೆಯಲ್ಲಿ ಮಾತೃಕಲ್ಪನೆಯು ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಹೀಗಾಗಿ ಪ್ರಕೃತಿಯಲ್ಲಿರುವ ಮಣ್ಣು, ನೀರು, ಮರ, ಎಲ್ಲವನ್ನು ದೇವತೆಯ ರೂಪದಲ್ಲಿ ಪೂಜಿಸಿಕೊಂಡು ಬರಲಾಗುತ್ತಿದೆ. ಹೀಗಾಗಿ ಪಂಪ ಸರೋವರವು ಮಾತೃ ದೇವತೆಯ ರೂಪವಾಗಿ ಪೂಜೆಗೊಳ್ಳುತ್ತಿತ್ತು.

ಪಂಪಾದೇವಿಯು ಶಿವನನ್ನ ವರಿಸಲು ಹೇಮಕೂಟದ ಉತ್ತರಕ್ಕಿರುವ ಪರ್ವತದ ಬಳಿಯ ಸರೋವರದ ದಡದಲ್ಲಿ ತಪಸ್ಸನ್ನು ಆಚರಿಸುತ್ತಾಳೆ. ಆ ತಪಸ್ಸಿಗೆ ಶಿವ ಪ್ರತ್ಯಕ್ಷನಾಗುತ್ತಾನೆ. ಆಗ ಶಿವ ಮತ್ತು ಪಾರ್ವತಿಯರ ಕಲ್ಯಾಣೋತ್ಸವ ನಡೆದ ಸ್ಥಳ ಹಂಪಿಯ ಹೇಮಕೂಟ. ಈ ನೆಲವನ್ನು ಗಿರಿಜಾ ಕಲ್ಯಾಣ ನಡೆದ ಸ್ಥಳವೆಂದು ಈಗಲೂ ನಂಬಿ ಹಲವಾರು ಆಚರಣೆಗಳನ್ನು ಆಚರಿಸಿಕೊಂಡು ಬರಲಾಗುತ್ತದೆ. ಪಂಪಾಂಬಿಕೆಗೂ ಇಲ್ಲಿ ಪ್ರತ್ಯೇಕ ದೇವಾಲಯವಿದ್ದು ದಿನವು ಇಲ್ಲಿ ಪೂಜೆ ಆಚರಣೆಗಳು ಪಾರಂಪಾರಿಕವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಡಿಸೆಂಬರ್ ತಿಂಗಳಲ್ಲಿ ಪಂಪಾಂಬಿಕೆ ನಿಶ್ಚಿತಾರ್ಥ ನಡೆದರೆ ಜೂನ್ ತಿಂಗಳಲ್ಲಿ ಇವರ ಕಲ್ಯಾಣೋತ್ಸವ ನಡೆದು ಅದರ ಪ್ರತೀಕವಾಗಿ ರಥೋತ್ಸವ ನಡೆಯುತ್ತದೆ ಹೀಗೆ ವರ್ಷದುದ್ದಕ್ಕೂ ಈ ನೆಲದಲ್ಲಿ ಶಕ್ತಿ ದೇವತೆ ಆಚರಣೆಗಳು ನಡೆದುಕೊಂಡು ಬಂದಿವೆ.

## ಸ್ವಚ್ಛತೆಯ ಮಹತ್ವ ಕುರಿತು ಜಾಗೃತಿ ಇರಲಿ: ಮೇಯರ್ ಮುಲ್ಲಂಗಿ ನಂದೀಶ್

ಮೋದಲನೆ ಪುಟದಿಂದ

ಬಳಿಯ ಬುಡಾ ಕಚೇರಿ ಆವರಣದ ಉದ್ಯಾನವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಹಾನಗರ ಪಾಲಿಕೆಯ ಸಿಬ್ಬಂದಿಯವರು ನಸುಕಿನ ಮುಂಜಾನೆ ವೇಳೆಯಲ್ಲೇ ನಗರ ಸ್ವಚ್ಛತೆ ಕಾರ್ಯದಲ್ಲಿ ಪಾಲ್ಗೊಳ್ಳುತ್ತಾರೆ. ಸಾರ್ವಜನಿಕರು ಕಸದ ತ್ಯಾಜ್ಯವನ್ನು ವಿಂಗಡಿಸಿ ಪಾಲಿಕೆಯ ವಾಹನಗಳಿಗೆ ನೀಡಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮಾತನಾಡಿ, ಸ್ವಚ್ಛತೆಯು ಒಂದು ಸೇವೆಯಾಗಿದ್ದು, ಪ್ರತಿಯೊಬ್ಬರೂ ಆಂತರಿಕ ಮತ್ತು ಬಹಿರಂಗವಾಗಿಯೂ ಸ್ವಚ್ಛವಾಗಬೇಕಿದೆ. ರೋಗ–ರುಜಿನ ಹೆಚ್ಚಾದಾಗ ಸ್ವಚ್ಛತೆಯ ಅರಿವು ಮೂಡುತ್ತದೆ. ಹಾಗಾಗಿ ಸ್ವಚ್ಛತೆ ಕಾರ್ಯವೂ ಒಂದೇ ದಿನಕ್ಕೆ ಸೀಮಿತವಾಗದೆ, ದೈನಂದಿನ ಚಟುವಟಿಕೆಗಳಲ್ಲಿ ಮತ್ತು ನಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛತೆಯಿಂದ ಕಾಪಾಡುವುದು ಪ್ರತಿಯೊಬ್ಬ ಜವಾಬ್ದಾರಿಯುತ ನಾಗರಿಕನ ಕರ್ತವ್ಯವಾಗಿದೆ ಎಂದು ಹೇಳಿದರು.

ಜಿಲ್ಲೆಯಾದ್ಯಂತ ಕಳೆದ 15 ದಿನಗಳಿಂದ ಸ್ವಚ್ಛತಾ ಸ್ವಪ್ತ ಆಂದೋಲನ ಕೈಗೊಂಡು ನಗರ ಗ್ರಾಮೀಣ ಪ್ರದೇಶ ಸೇರಿದಂತೆ ವಿವಿಧೆಡೆ ಶುಚಿತ್ವಗೊಳಿಸಲಾಗಿದೆ. ಎಲ್ಲರೂ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛತೆಯಿಂದ ಕಾಪಾಡೋಣ ಎಂದರು. ಇದೇ ವೇಳೆ ಸ್ವಚ್ಛತೆ ಕುರಿತ ಪ್ರತಿಜ್ಞಾ ವಿಧಿ ಸ್ವೀಕರಿಸಲಾಯಿತು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್.ಎನ್ ಝುಬೇರ್ ಸೇರಿದಂತೆ ಮಹಾನಗರ ಪಾಲಿಕೆಯ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿ, ಪೌರ ಕಾರ್ಮಿಕರು, ಸಾರ್ವಜನಿಕರು ಮತ್ತು ಇತರರಿದ್ದರು.

# ಕೊಟ್ಟೂರು ತಾಲೂಕು ಅಭಿವೃದ್ಧಿಗೆ ಆಗ್ರಹಿಸಿ ಧರಣಿ

## ತಾಲೂಕು ಘೋಷಣೆಯಾಗಿ 6 ವರ್ಷ ಕಳೆದರೂ ಕಚೇರಿ ಭಾಗ್ಯವಿಲ್ಲ: ಎಸ್.ತಿಂದಪ್ಪ



■ ಹಂಪಿ ಟೈಮ್ಸ್ ಕೊಟ್ಟೂರು

ಗಾಂಧಿ ಜಯಂತಿ ಪ್ರಯುಕ್ತ ಬೆಳಿಗ್ಗೆ ಗಾಂಧಿ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ, ಗಾಂಧಿ ಪ್ರತಿಮೆ ಮುಂಭಾಗ ಕೊಟ್ಟೂರು ತಾಲೂಕು ಅಭಿವೃದ್ಧಿಗೆ 11 ವಿವಿಧ ಬೇಡಿಕೆಗಳ ಹಕ್ಕೊತ್ತಾಯಿಸಿ ಹಿರಿಯ ನಾಗರಿಕರ ಒಕ್ಕೂಟ ಹಾಗೂ ಹಿರಿಯ ಮುಖಂಡರ ಸಹಯೋಗದೊಂದಿಗೆ ಬಿಜೆಪಿ ಮುಖಂಡ ಎಸ್. ತಿಂದಪ್ಪ ಧರಣಿ ಸತ್ಯಾಗ್ರಹ ಕೈಗೊಂಡರು.

ಎಸ್.ತಿಂದಪ್ಪ ಪತ್ರಿಕೆಯೊಂದಿಗೆ ಮಾತನಾಡಿ, ಕೊಟ್ಟೂರು ತಾಲೂಕು ರಚನೆಯಾಗಿ 6 ವರ್ಷ ಕಳೆದರು ತಾಲೂಕಿಗೆ ಅತ್ಯಂತ ಅವಶ್ಯಕ ಇಲಾಖೆಗಳೇ ಮಂಜೂರಾಗಿಲ್ಲ, ಶೀಘ್ರ ಪೂರ್ಣ ಪ್ರಮಾಣದ ಇಲಾಖೆಗಳು ಪ್ರಾರಂಭಗೊಳ್ಳಲು ಹಾಗೂ ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸುವಂತೆ ಆಗ್ರಹಿಸಿ 11 ಬೇಡಿಕೆ ಈಡೇರಿಕೆಗೆ ಧರಣಿ ಸತ್ಯಾಗ್ರಹ ನಡೆಸುತ್ತಿರುವುದಾಗಿ ತಿಳಿಸಿದರು.

ಜಿಲ್ಲಾಧಿಕಾರಿಗಳು ಈ ಧರಣಿ ಸತ್ಯಾಗ್ರಹ ಬಗ್ಗೆ ನಿರ್ಲಕ್ಷ್ಯ ತಾಳದೆ ಶೀಘ್ರ ನಮ್ಮ ಬೇಡಿಕೆ ಈಡೇರಿಕೆಗೆ ಸಂಬಂಧ ಪಟ್ಟ ಇಲಾಖೆ ಸಚಿವರೊಂದಿಗೆ ಚರ್ಚಿಸಬೇಕು. 2025 ಗಣರಾಜ್ಯೋ ತ್ಸವ ದಿನದ ಒಳಗಾಗಿ ಬೇಡಿಕೆ ಈಡೇರದಿದ್ದರೆ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದರು.

ಧರಣಿ ಮುಕ್ತಾಯದ ಹಂತದಲ್ಲಿ ಕೊಟ್ಟೂರು ತಹಶಿಲ್ದಾರ ಅಮರೇಶ್ ಜಿ.ಕೆ ಅವರು ಧರಣಿ ನಿರತ ಎಸ್. ತಿಂದಪ್ಪ ಮತ್ತು ಅವರ ಬೆಂಬಲಿಗರ ಬೇಡಿಕೆಗಳ ಮನವಿ ಪತ್ರವನ್ನು ಸ್ವೀಕರಿಸಿ.ಸಂಬಂಧ ಪಟ್ಟ ಅಧಿಕಾರಿಗಳಿಗೆ ಹಾಗೂ ಸಚಿವರಿಗೆ ತಲುಪಿಸುವುದಾಗಿ ಹೇಳಿದರು.

ಧರಣಿ ಸತ್ಯಾಗ್ರಹದಲ್ಲಿ ಬಿಜೆಪಿ ಪಕ್ಷದ ಜಿಲ್ಲಾ ಅಧ್ಯಕ್ಷರು ಚನ್ನಬಸವನ ಗೌಡ್ರು, ಬಿಜೆಪಿ ಕೊಟ್ಟೂರು ತಾಲೂಕು ಉಪಾಧ್ಯಕ್ಷ ಅಂಗಡಿ ಪಂಪಾಪತಿ, ಪಪಂ ಸದಸ್ಯ ಬೋರವೆಲ್ ತಿಪ್ಪೇಸ್ವಾಮಿ, ಚಾನು ಕೋಟಿ ಮಠದ ಶಿವಾಚಾರ್ಯ ಮಹಾಸ್ವಾಮಿಗಳು ಡಾ.ಸಿದ್ಧಲಿಂಗ ಸ್ವಾಮಿಗಳು, ಭೂತ ಭುಜಂಗ ಮಠದ ಶ್ರೀಗಳು, ಕೊಟ್ಟೂರು ತಾಲೂಕು ಕರವೆ ಅಧ್ಯಕ್ಷ ಡಿ. ಕೊಟ್ರೇಶಪ್ಪ, ವಕೀಲರು ಟಿ. ಎಂ.ಸೋಮಯ್ಯ, ಕೋನಾಪುರ ಬಸವರಾಜ್, ಶಿವನಗುತ್ತಿ, ಡಿ. ಕರಿಯಪ್ಪ, ಬಣಕಾರ ಕೆಂಚಪ್ಪ, ಶ್ರೀಧರ ಶೆಟ್ಟಿ ಸೇರಿದಂತೆ ಪಟ್ಟಣ ಸಂಘ ಸಮಿತಿಯವರು ಧರಣಿಯಲ್ಲಿ ಪಾಲ್ಗೊಂಡು ಬೆಂಬಲಿಸಿದರು.

# ಮಹಾತ್ಮ ಗಾಂಧೀಜಿ, ಶಾಸ್ತ್ರೀಜಿ ಸ್ಮರಣೆ

ಮೂರನೆ ಪುಟದಿಂದ

ಕಟ್ಟಕಡೆಯ ವ್ಯಕ್ತಿಯು ದೇಶದ ಆಸ್ತಿಯಾಗಿದ್ದು, ಅವರ ಸೇವೆಯನ್ನು ಗುರುತಿಸಿ ಗೌರವಿಸುವ ಮಹಾತ್ಮ ಗಾಂಧೀಯವರ ಕನಸನ್ನು ನನಸು ಮಾಡುವ ಸಣ್ಣ ಪ್ರಯತ್ನಕ್ಕೆ ವಿವಿಯು ಇಂದು ಪ್ರಯತ್ನಿಸಿದೆ. ಕಾಯಕವೇ ಕೈಲಾಸ ಎಂದು ನಂಬಿರುವ ಎಲ್ಲ ಸೇವಾನಿರತ ವ್ಯಕ್ತಿಗಳನ್ನು ನಾವೆಲ್ಲ ಗೌರವಿಸಬೇಕು ಎಂದು ಹೇಳಿದರು.

ಅಂಗನವಾಡಿ ಕಾರ್ಯಕರ್ತೆ ಎಂ ವಾಣಿ, ಆರೋಗ್ಯ ಇಲಾಖೆಯ ಜಗನ್ನಾಥ, ಹಮಾಲಿ ಮಾಡುವ ಲಕ್ಷ್ಮಿನಾರಾಯಣ, ಕೆಎಸ್ಆರ್‌ಟಿಸಿ ಚಾಲಕರಾದ ಅಶೋಕ್, ದಾದಾಪೀರ್, ಪೌರಕಾ ರ್ಮಿಕ ಹನುಮಂತಪ್ಪ, ಪೋಸ್ಟ್‌ಮನ್ ಮೌನೇಶ್, ಆಟೋ ಚಾಲಕ ನಾಗರಾಜ್‌ರಾವ್, ಕೂಲಿ ಕಾರ್ಮಿಕ ಚಂದ್ರಶೇಖರ್, ಆಶಾ ಕಾರ್ಯಕರ್ತೆ ರತ್ನಮ್ಮ, ಧೋಬಿಯಾದ ಜಮನಮ್ಮ, ಮನೆ ಕೆಲಸಗಾರರಾದ ಪದ್ಮಾವತಿ, ಹಾಲು ಮಾರುವ ಮಹೇಶ್, ಹೂ ಮಾರಾಟಗಾರ ಲೋಕಪ್ಪ, ದಿನಪತ್ರಿಕೆ ವಿತರಕ ಸತೀಶ್, ಜಿಲ್ಲಾ ಆಸ್ಪತ್ರೆಯ ಸಿದ್ಧಯ್ಯ, ಅಭಿನಂದನ್, ಟೈಲರ್ ಕೃಷ್ಣರಾವ್ ಹಾಗೂ ಕೆಇಬಿ ಲೈನ್‌ಮನ್ ಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ರಂಗನಾಥ್ ಮತ್ತು ರಾಘವೇಂದ್ರ ಗುಡದೂರ ಅವರ ತಂಡದಿಂದ ಸುಮಧುರ ಗಾಂಧಿ ನಮನ ಸಂಗೀತ ಗೋಷ್ಠಿ ನಡೆಯಿತು. ಎನ್ಎಸ್ಎಸ್ ಸಂಯೋಜಕ ಡಾ ಕುಮಾರ್ ವೇದಿಕೆಯಲ್ಲಿದ್ದರು. ಡಾ. ಶಶಿಧರ್ ಕೆಲ್ಲೂರ್ ನಿರೂಪಿಸಿದರು. ವಿವಿಯ ಬೋಧಕ ಬೋಧಕೇ ತರ ಸಿಬ್ಬಂದಿ ಮುಂಜಾನೆ 6–9 ಗಂಟೆವರೆಗೆ ನಿರಂತರ ಶ್ರಮದಾನ ನಿರ್ವಹಿಸಿನಂತರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ನವಶಕ್ತಿ ದರ್ಶನ
ನಿಮ್ಮ ಗ್ರಾಮ/ಊರಿನ ಶಕ್ತಿ ದೇವತೆಗಳ ದಸರಾ ವಿಶೇಷ ಅಲಂಕೃತ ಫೋಟೊ ಕಳಿಸಿ
(ದೇವಿಯ ಹೆಸರು, ಊರು, ತಾಲೂಕು ನಮೂದಿಸಿ)



ಹಂಪಿ ಟೈಮ್ಸ್: 94486 33038
ನವರಾತ್ರಿ ಅಲಂಕೃತ ಆಯ್ದ ಫೋಟೊಗಳನ್ನು ಹಂಪಿ ಟೈಮ್ಸ್‌ನಲ್ಲಿ ಪ್ರಕಟಿಸಲಾಗುವುದು
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ನಾಡಹಬ್ಬ ದಸರಾ ಹಬ್ಬಕ್ಕೆ ಕ್ಷಣಗಣನೆ...
ನಾಡಿನ ಜನತೆಗೆ, ನಿಮ್ಮ ನೆಚ್ಚಿನ ಗ್ರಾಹಕರಿಗೆ ನವರಾತ್ರಿಯ ಶುಭಾಶಯಗಳು ತಿಳಿಸಲು ಇಂದೇ ನಿಮ್ಮ ಜಾಹೀರಾತು ಬುಕ್ಕಿಂಗ್ ಮಾಡಿ
ಹಂಪಿ ಟೈಮ್ಸ್ ಇ-ಪೇಪರ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055